ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 18 ಯುಓವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 21.03.2020.

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬೆಂಗಳೂರು-560 001.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ರಾಮದಾಸ್ ಎಸ್.ಎ. (ಕೃಷ್ಣರಾಜ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. 1826ಗೆ ಉತ್ತರಿಸುವ ಕುರಿತು.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ, ಇವರ ಪತ್ರ ಸಂ. ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.1826/2020, ದಿನಾಂಕ:10.03.2020.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ರಾಮದಾಸ್ ಎಸ್.ಎ (ಕೃಷ್ಣರಾಜ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. 1826ಗೆ ಸಂಬಂಧಿಸಿದಂತೆ, ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎನ್. ವೀರಬ್ರಹ್ಮಚಾರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ		1826
ಮಾನ್ಯ ಸದಸ್ಯರ ಹೆಸರು		ಶ್ರೀ ರಾಮದಾಸ್ ಎಸ್.ಎ. (ಕೃಷ್ಣರಾಜ)
ಉತ್ತರಿಸುವ ಸಚಿವರು		ಮಾನ್ಯ ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)
ಉತ್ತರಿಸಬೇಕಾದ ದಿನಾಂಕ		26.03.2020
ಪ್ರಶ್ನೆ		ಉತ್ತರ
(ಅ)	ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಿಬ್ಬಂದಿಯ ವೇತನ ಮತ್ತು ಪಿಂಚಣಿಗಾಗಿ ವಿಶ್ವವಿದ್ಯಾನಿಲಯದ ಯಾವ ನಿಧಿ ಅಥವಾ ಸರ್ಕಾರದ ಯಾವ ಗ್ರಾಂಟ್‌ನಿಂದ ಭರಿಸಲಾಗಿದೆ; (ವೆಚ್ಚದ ವಿವರ ಒದಗಿಸುವುದು)	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ 1994ರ ಅಧ್ಯಾಯ VII ನಿಯಮ 30 ಹಾಗೂ ಎರಡನೇ ಪರಿಚ್ಛೇಧ ನಿಯಮ 8ರಡಿ ವ್ಯವಸ್ಥಾಪನಾ ಮಂಡಳಿಗೆ ಪ್ರದತ್ತವಾದ ಅಧಿಕಾರದಡಿಯಲ್ಲಿ **ಪಿಂಚಣಿದಾರರಿಗೆ ಪಿಂಚಣಿಯನ್ನು ಪಾವತಿಸಲು ಪಿಂಚಣಿ ಕಾರ್ಪಸ್‌ನಿಧಿಯನ್ನು** ಹಾಗೂ **ಆಪತ್ಕಾಲದ ಸಿಬ್ಬಂದಿ ವೇತನ ಭರಿಸಲು ಕಾರ್ಪಸ್‌ನಿಧಿಯನ್ನು** 2011–12ನೇ ಸಾಲಿನಲ್ಲಿ ಸ್ಥಾಪಿಸಲಾಗಿದೆ. ಪಿಂಚಣಿ ಕಾರ್ಪಸ್ ನಿಧಿಯಿಂದ ಬರುವ ಬಡ್ಡಿ ಮೊತ್ತದಿಂದ ನಿವೃತ್ತ ನೌಕರರಿಗೆ ಪಿಂಚಣಿಯನ್ನು ಹಾಗೂ ವೇತನ ಕಾರ್ಪಸ್ ನಿಧಿಯಿಂದ ಲಭ್ಯವಾಗುವ ಬಡ್ಡಿ ಹಣ ಹಾಗೂ ವಿದ್ಯಾರ್ಥಿಗಳಿಂದ ಸಂಗ್ರಹವಾಗಿದ್ದ ಶುಲ್ಕದಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಿಬ್ಬಂದಿ ವೇತನ ವೆಚ್ಚವನ್ನು ಭರಿಸಲಾಗಿದೆ. **ವೇತನ ವೆಚ್ಚದ ವಿವರಗಳು ಈ ಕೆಳಕಂಡಂತಿವೆ;** ಕ್ರ.ಸಂ. | ಶೈಕ್ಷಣಿಕ ವರ್ಷ | ಮೊತ್ತ (ರೂ.ಗಳಲ್ಲಿ) 1 | 2016-17 | 20,55,06,935-00 2 | 2017-18 | 22,96,11,036-00 3 | 2018-19 | 24,97,91,908-00 **ಪಿಂಚಣಿ ವೆಚ್ಚದ ವಿವರಗಳು ಈ ಕೆಳಕಂಡಂತಿವೆ;** ಕ್ರ.ಸಂ. | ಶೈಕ್ಷಣಿಕ ವರ್ಷ | ಮೊತ್ತ (ರೂ.ಗಳಲ್ಲಿ) 1 | 2016-17 | 3,48,32,007-00 2 | 2017-18 | 3,96,55,366-00 3 | 2018-19 | 6,04,16,529-00 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಆರ್ಥಿಕವಾಗಿ ಸಬಲವಾಗಿರುವುದರಿಂದ ಸರ್ಕಾರದಿಂದ ವಿಶ್ವವಿದ್ಯಾನಿಲಯದ

<table>
<tr><td></td><td></td><td>ಸಿಬ್ಬಂದಿಗಳ ವೇತನ ಹಾಗೂ ಪಿಂಚಣಿಗೆ ಸಂಬಂಧಿಸಿದಂತೆ ಅನುದಾನ ಒದಗಿಸಿರುವುದಿಲ್ಲ.</td></tr>
<tr><td>(ಆ)</td><td>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿನ ಸಿಬ್ಬಂದಿಯ ವೇತನ ಮತ್ತು ಪಿಂಚಣಿಯ ವೆಚ್ಚವನ್ನು ಭರಿಸಲು ಸ್ಥಿರೀಕರಿಸಲಾಗಿರುವ ಕಾರ್ಪಸ್ ಫಂಡ್‌ನ ವಿವರ ಮತ್ತು ಅದರ ಷರತ್ತುಗಳು ಯಾವುವು; (ವಿವರ ನೀಡುವುದು)</td><td>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ 1994ರ ಎರಡನೇ ಪರಿಚ್ಛೇಧ ನಿಯಮ 8ರಡಿ ವ್ಯವಸ್ಥಾಪನಾ ಮಂಡಳಿಗೆ ಪ್ರದತ್ತವಾದ ಅಧಿಕಾರದಡಿಯಲ್ಲಿ ಆಪತ್ಕಾಲದ ವೇತನ ಕಾರ್ಪಸ್ ನಿಧಿಯಾಗಿ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ 1994ರ ಅಧ್ಯಾಯ VII ನಿಯಮ 30 ಹಾಗೂ ಎರಡನೇ ಪರಿಚ್ಛೇಧ ನಿಯಮ 8ರಡಿ ವ್ಯವಸ್ಥಾಪನಾ ಮಂಡಳಿಗೆ ಪ್ರದತ್ತವಾದ ಅಧಿಕಾರದಡಿಯಲ್ಲಿ ಪಿಂಚಣಿ ಕಾರ್ಪಸ್ ನಿಧಿಯಾಗಿ 2011–12ನೇ ಸಾಲಿನಲ್ಲಿ ಸ್ಥಾಪಿಸಲ್ಪಟ್ಟಿದೆ.

ಸದರಿ ನಿಧಿಗಳಿಂದ ಬರುವ ಬಡ್ಡಿಯ ಮೊತ್ತವನ್ನು ವಿಶ್ವವಿದ್ಯಾನಿಲಯದ ಆದಾಯವಾಗಿ ಪರಿಗಣಿಸಲಾಗಿದ್ದು, ವೇತನಕ್ಕೆ ಕೊರತೆಯಾದಾಗ ವೇತನ ಕಾರ್ಪಸ್ ನಿಧಿಯಿಂದ ಬರುವ ಬಡ್ಡಿಯನ್ನು ಬಳಸಿಕೊಳ್ಳಲು ಹಾಗೂ ಪಿಂಚಣಿ ಕಾರ್ಪಸ್ ನಿಧಿಯಿಂದ ಬರುವ ಬಡ್ಡಿಯನ್ನು ಪಿಂಚಣಿ ಪಾವತಿಗೆ ಬಳಸಿಕೊಳ್ಳಲು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ವ್ಯವಸ್ಥಾಪನಾ ಮಂಡಳಿಯಿಂದ ಅನುಮೋದನೆ ಪಡೆದಿರುತ್ತದೆ.</td></tr>
<tr><td>(ಇ)</td><td>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2009 ರಿಂದ 2018ರವರೆಗೆ ಇನ್‌ಹೌಸ್ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ ಸಂದಾಯವಾದ ಒಟ್ಟು ಶುಲ್ಕದ ವರ್ಷವಾರು ವಿವರ ನೀಡುವುದು;</td><td>2009 ರಿಂದ 2018ರವರೆಗೆ ಇನ್‌ಹೌಸ್ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದು ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಂದ ಸಂದಾಯವಾದ ಒಟ್ಟು ಶುಲ್ಕದ ವರ್ಷವಾರು ವಿವರ ಈ ಕೆಳಕಂಡಂತಿವೆ;
<table>
<tr><th>ಕ್ರ.ಸಂ.</th><th>ಶೈಕ್ಷಣಿಕ ವರ್ಷ</th><th>ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>2009–10</td><td>30,36,99,679–00</td></tr>
<tr><td>2</td><td>2010–11</td><td>44,66,87,383–00</td></tr>
<tr><td>3</td><td>2011–12</td><td>44,76,45,481–00</td></tr>
<tr><td>4</td><td>2012–13</td><td>45,18,25,013–00</td></tr>
<tr><td>5</td><td>2013–14</td><td>44,04,77,450–00</td></tr>
<tr><td>6</td><td>2014–15</td><td>40,84,92,332–00</td></tr>
<tr><td>7</td><td>2015–16</td><td rowspan="3">ಯುಜಿಸಿ ಮಾನ್ಯತೆ ಅಲಭ್ಯತೆಯಿಂದಾಗಿ ಈ ಸಾಲುಗಳಲ್ಲಿ ಪ್ರವೇಶಾತಿ ನಡೆದಿರುವುದಿಲ್ಲ.</td></tr>
<tr><td>8</td><td>2016–17</td></tr>
<tr><td>9</td><td>2017–18</td></tr>
<tr><td>10</td><td>2018–19</td><td>8,05,38,582–00</td></tr>
</table></td></tr>
</table>

<table>
<tr>
<td>(ಈ)</td>
<td>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಗಳಲ್ಲಿ 2018 ರಿಂದ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ ಸಂದಾಯವಾದ ಒಟ್ಟು ಶುಲ್ಕದ ವರ್ಷವಾರು ವಿವರ ನೀಡುವುದು.</td>
<td>2018 ರಿಂದ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ ಸಂದಾಯವಾದ ಒಟ್ಟು ಶುಲ್ಕದ ವರ್ಷವಾರು ವಿವರ ಈ ಕೆಳಕಂಡಂತಿದೆ;
<table>
<tr><th>ಕ್ರ.ಸಂ.</th><th>ಶೈಕ್ಷಣಿಕ ವರ್ಷ</th><th>ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>2018-19</td><td>8,05,38,582-00</td></tr>
<tr><td>2</td><td>2019-20
(ದಿ:17.03.2020ರವರೆಗೆ)</td><td>13,05,92,338-00</td></tr>
</table>
</td>
</tr>
</table>

ಸಂಖ್ಯೆ: ಇಡಿ 18 ಯುಓವಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು
(ಉನ್ನತ ಶಿಕ್ಷಣ, ಐಟಿ & ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ)

ಕರ್ನಾಟಕ ಸರ್ಕಾರ

ಸಂಖ್ಯೆ: ಇಪಿ 13 ಪಿಡಿಬಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
*ಬೆಂಗಳೂರು, ದಿನಾಂಕ:*20/03/2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,
ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ,
ಬೆಂಗಳೂರು-560 001.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

U/S
26/3/20

ಮಾನ್ಯರೇ,

ವಿಷಯ:- ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ ಪಾಟೀಲ್, ಶಾಸಕರು(ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3070ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ:- ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/ 15ನೇವಿಸ/ 6ಅ/ಪ್ರ.ಸಂ.3070/ 2020 ದಿ:11/03/2020

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ ಪಾಟೀಲ್, ಶಾಸಕರು(ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3070ಕ್ಕೆ ಉತ್ತರದ 110 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ತಮ್ಮ ನಂಬುಗೆಯ,

(ಬಿ.ಧನಂಜಯ) 20/3
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ(ಆಡಳಿತ).

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3070

ಸದಸ್ಯರ ಹೆಸರು : ಶ್ರೀ ಶಿವಾನಂದ ಪಾಟೀಲ(ಬಸವನಬಾಗೇವಾಡಿ)

ಉತ್ತರಿಸುವ ದಿನಾಂಕ : 26/03/2020

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯಲ್ಲಿ ನಿಡಗುಂದಿ ಮತ್ತು ಕೋಲ್ಹಾರಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇವೆಯೇ ;	ಸರ್ಕಾರಿ ಆದೇಶ ಸಂಖ್ಯೆ:ಕಂ.ಇ. 35. ಭೂದಾಮ 2017 ದಿ:06/09/2017ರ ಆದೇಶದನ್ವಯ ವಿಜಯಪುರ ಜಿಲ್ಲೆಯ ನಿಡಗುಂದಿ ಮತ್ತು ಕೊಲ್ಹಾರಗಳನ್ನು ಕಂದಾಯ ತಾಲ್ಲೂಕುಗಳನ್ನಾಗಿ ಘೋಷಣೆ ಮಾಡಲಾಗಿದ್ದು, ಸದರಿ ತಾಲ್ಲೂಕುಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಪ್ರಾರಂಭಿಸುವ ಕುರಿತು ಪರಿಶೀಲನೆಯಲ್ಲಿರುತ್ತದೆ.
ಆ)	ಹಾಗಿದ್ದಲ್ಲಿ, ಸದರಿ ಕಾರ್ಯಾಲಯ ಮಂಜೂರು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಸದರಿ ತಾಲ್ಲೂಕುಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳನ್ನು ಪ್ರಾರಂಭಿಸುವ ಕುರಿತು ಹೊಸ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳನ್ನು ಸ್ಥಾಪಿಸುವ ಕುರಿತು ದಿನಾಂಕ:04/07/2019ರಂದು ಹಿಂದಿನ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆರ್ಥಿಕ ಇಲಾಖೆಯವರು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗಳನ್ನು ಹಾಗೂ ಹುದ್ದೆಗಳನ್ನು ಸೃಜಿಸುವ ಸಂಬಂಧ ಕೋರಿರುವ ಮಾಹಿತಿಯನ್ನು ಒದಗಿಸುವಂತೆ ತಿಳಿಸಲಾಗಿದೆ. ಅದರಂತೆ ಆರ್ಥಿಕ ಇಲಾಖೆಗೆ ಮಾಹಿತಿಯನ್ನು ಒದಗಿಸಲು 3 ಆಯುಕ್ತಾಲಯದ ಮುಖ್ಯಸ್ಥರುಗಳೊಂದಿಗೆ ಸಭೆ ನಡೆಸಿ ತಾಲ್ಲೂಕು ಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳನ್ನು ಪ್ರಾರಂಭಿಸುವ ಕುರಿತು ಹುದ್ದೆಗಳ ಸೃಜನೆ / ಮರುವಿನ್ಯಾಸ / ಕಟ್ಟಡಗಳ ಲಭ್ಯತೆಯ ಕುರಿತಂತೆ ಪೂರ್ಣ ವಿವರಗಳೊಂದಿಗೆ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿದ್ದು, ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.
ಇ)	ಈ ಕಾರ್ಯಾಲಯ ಪ್ರಾರಂಭ ಮಾಡಲು ವಿಳಂಬ ಆಗುತ್ತಿರುವುದಕ್ಕೆ ಕಾರಣಗಳೇನು;	
ಈ)	ಯಾವ ನಿರ್ದಿಷ್ಟ ಕಾಲಮಿತಿಯೊಳಗಾಗಿ ನಿಡಗುಂದಿ ಮತ್ತು ಕೊಲ್ಹಾರ ತಾಲ್ಲೂಕು ಕೇಂದ್ರಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯವನ್ನು ಸರ್ಕಾರವು ಪ್ರಾರಂಭ ಮಾಡುವುದು(ವಿವರ ನೀಡುವುದು)	ಆರ್ಥಿಕ ಇಲಾಖೆಯಿಂದ ಸಹಮತಿ ಪಡೆದು ತಾಲ್ಲೂಕು ಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳನ್ನು ಪ್ರಾರಂಭಿಸಲಾಗುವುದು.

ಸಂಖ್ಯೆ:ಇಡಿ 13 ಪಿಬಿಬಿ 2020

(ಎಸ್.ಸುರೇಶ್‌ಕುಮಾರ್)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಐಟಿಬಿಟಿ 83 ಎಸ್‌ಟಿಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
5ನೇ ಮಹಡಿ, 5ನೇ ಹಂತ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:21.03.2020.

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

UIS
26/03/2020

ಇವರಿಗೆ:
ಕಾರ್ಯದರ್ಶಿಗಳು,
ವಿಧಾನ ಸಭೆ ಸಚಿವಾಲಯ,
ವಿಧಾನ ಸೌಧ.

ಮಾನ್ಯರೇ,

ವಿಷಯ: ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಶಿವಶಂಕರ ರೆಡ್ಡಿ. ಎನ್. ಹೆಚ್. (ಗೌರಿಬಿದನೂರು) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:3082 ಕ್ಕೆ ಉತ್ತರಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಶಿವಶಂಕರ ರೆಡ್ಡಿ. ಎನ್. ಹೆಚ್. (ಗೌರಿಬಿದನೂರು) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:3082ಕ್ಕೆ ಸಂಬಂಧಿಸಿದ ಕನ್ನಡ ಭಾಷೆಯ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ತಮ್ಮನಂಬುಗೆಯ,

Suma. B.S.
21/3/2020

ಸರ್ಕಾರದ ಅಧೀನ ಕಾರ್ಯದರ್ಶಿ,
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ,ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ,
(ವಿಜ್ಞಾನ ಮತ್ತು ತಂತ್ರಜ್ಞಾನ ಶಾಖೆ).

ಪ್ರತಿ:

1. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ, ವಿ,ಮಾತಂ,ಜೈತಂ ಹಾಗೂ ವಿತಂ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಸಹಾಯಕರು,ವಿ,ಮಾತಂ,ಜೈತಂ ಹಾಗೂ ವಿತಂ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	3082
ಸದಸ್ಯರ ಹೆಸರು	ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್(ಗೌರಿಬಿದನೂರು)
ಉತ್ತರಿಸಬೇಕಾದ ದಿನಾಂಕ	26-03-2020
ಉತ್ತರಿಸಬೇಕಾದ ಸಚಿವರು	ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.
ಪ್ರಶ್ನೆ	**ಉತ್ತರ**
ಅ) ರಾಜ್ಯದಲ್ಲಿ ಇದುವರೆಗೆ ವಿಜ್ಞಾನ ಕ್ಷೇತ್ರದಲ್ಲಿ ಎಷ್ಟು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ; (ವಿವರ ನೀಡುವುದು) ಆ) ಇವುಗಳಲ್ಲಿ ಎಷ್ಟು ಕೇಂದ್ರಗಳು ಸಂಪೂರ್ಣವಾಗಿ ಕಾರ್ಯನಿರ್ವಹಿಸುತ್ತಿವೆ;	ರಾಜ್ಯದಲ್ಲಿ ಪ್ರಸ್ತುತದವರೆಗೆ ಒಟ್ಟು 5 ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ರಾಜ್ಯ ಸರ್ಕಾರದ ಸಂಪೂರ್ಣ ಅನುದಾನದಿಂದ ಸ್ಥಾಪನೆ ಮಾಡಲಾಗಿದ್ದು, ಅವುಗಳ ವಿವರ ಈ ಕೆಳಗಿನಂತಿದೆ: 1. ಬಳ್ಳಾರಿ 2. ಬೀದರ್ 3. ಕಾರವಾರ 4. ರಾಯಚೂರು 5. ಚಿಕ್ಕಬಳ್ಳಾಪುರ ಈ ಎಲ್ಲಾ ಕೇಂದ್ರಗಳು ಜಿಲ್ಲಾಡಳಿತದ ಸಹಯೋಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸೊಸೈಟಿಯ ಮುಖಾಂತರ ಕಾರ್ಯನಿರ್ವಹಿಸುತ್ತಿವೆ.
ಇ) ಇವುಗಳ ನಿರ್ವಹಣೆಗೆ ತಂತ್ರಜ್ಞರ ಕೊರತೆ ಇರುವುದರಿಂದ ವಿದ್ಯಾರ್ಥಿಗಳಿಗೆ ಸರಿಯಾದ ಮಾಹಿತಿ ಮತ್ತು ಮಾರ್ಗದರ್ಶನ ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ.
ಈ) ಬಂದಿದ್ದಲ್ಲಿ, ನುರಿತ ವಿಶೇಷ ವಿಜ್ಞಾನ ಪರಿಣಿತರನ್ನು ಕೇಂದ್ರದ ಜೊತೆಗೆ ಮಂಜೂರು ಮಾಡಿ, ನಿರ್ವಹಿಸಲು ಸಾಧ್ಯವಿಲ್ಲವೇ? (ವಿವರ ನೀಡುವುದು)	ಅನ್ವಯಿಸುವುದಿಲ್ಲ.

(ಐಟಿಬಿಟಿ 83 ಎಸ್‌ಟಿಎಸ್ 2020)

(ಡಾ।। ಅಶ್ವಥ್ ನಾರಾಯಣ ಸಿ. ಎನ್.)
ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ,
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.

ಕರ್ನಾಟಕಸರ್ಕಾರ

ಸಂಖ್ಯೆ: ಸಿಆಸುಇ 26 ಎಸ್‌ಎಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 23.03.2020

26/3/2020

ಇವರಿಂದ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಸಿಆಸುಇಲಾಖೆ (ಇ-ಆಡಳಿತ) ಮತ್ತು
ಮಿಷನ್ ನಿರ್ದೇಶಕರು, ಸಕಾಲ ಮಿಷನ್,
ಬೆಂಗಳೂರು.

ಇವರಿಗೆ
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ಬೆಂಗಳೂರು

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :2726ಕ್ಕೆ ಉತ್ತರಿಸುವ ಬಗ್ಗೆ

ಉಲ್ಲೇಖ: ಪತ್ರ ಸಂಖ್ಯೆ: ವಿಸಪ್ರಶಾ/15ನೇವಿಸ/6ಅ/ಚುಗು-ಚುರ.ಪ್ರಶ್ನೆ/15/2020, ದಿನಾಂಕ: 13.03.2020

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಪತ್ರದನ್ವಯ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2726ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದೇನೆ.

ತಮ್ಮ ವಿಶ್ವಾಸಿ,

(ಮೇಘನ ಜಿ.)
ಸಹಾಯಕ ಆಡಳಿತಾಧಿಕಾರಿ
ಸಿಆಸುಇ (ಇ-ಆಡಳಿತ) ,
ಸಕಾಲ ಮಿಷನ್

ಪ್ರತಿಗಳು

1. ಮಾನ್ಯ ಮುಖ್ಯ ಮಂತ್ರಿಯವರ ಅಪರ ಕಾರ್ಯದರ್ಶಿಗಳು, ವಿಧಾನಸೌಧ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ
4. ಅಪರ ಮಿಷನ್ ನಿರ್ದೇಶಕರು -1, ಸಕಾಲ ಮಿಷನ್
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಿಆಸುಇ (ಆಸು)
6. ಕಚೇರಿ ಪ್ರತಿ / ಶಾಖಾರಕ್ಷಾ ಕಡತ

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2726
2. ಸದಸ್ಯರ ಹೆಸರು : ಶ್ರೀ ಎಸ್.ಎನ್.ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ)
3. ಉತ್ತರಿಸುವ ದಿನಾಂಕ : 26-03-2020
4. ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಸಕಾಲ ಯೋಜನೆಯನ್ನು ಯಾವ ವರ್ಷದಿಂದ ಜಾರಿಗೆ ತರಲಾಯಿತು; ಸದರಿ ಯೋಜನೆಗೆ ನಿಗದಿಪಡಿಸಿದ ಸಿಬ್ಬಂದಿಗಳ ಸಂಖ್ಯೆ ಎಷ್ಟು (ವಿವರಗಳನ್ನು ನೀಡುವುದು);</td><td>ಸಕಾಲ ಯೋಜನೆಯನು 02.04.2012ರಿಂದ ರಾಜ್ಯಾದ್ಯಂತ ಜಾರಿಗೆ ತರಲಾಗಿದೆ. ಸಕಾಲ ಯೋಜನೆ ನಿರ್ವಹಣೆಗಾಗಿ ಪ್ರತ್ಯೇಕ ಸಿಬ್ಬಂದಿಯನು ನೇಮಕ ಮಾಡಲಾಗಿರುವುದಿಲ. ಸಂಬಂಧಪಟ್ಟ ಇಲಾಖೆಯ ಕಛೇರಿಗಳಲಿ ಸಕಾಲ ವಿಷಯ ನಿರ್ವಾಹಕರು ಕಾರ್ಯನಿರ್ವಹಿಸುತ್ತಿರುತ್ತಾರೆ. ಅಲದೇ ಈ ಯೋಜನೆಯಡಿ ತಾಂತ್ರಿಕ ವಿಚಾರಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಸಹಕರಿಸಲು ಪ್ರತಿ ಜಿಲ್ಲೆಗೆ ಒಬ್ಬರಂತೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒಬ್ಬರು ಒಟು 31 ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರನ್ನು ನಿಯೋಜಿಸಲಾಗಿದೆ.</td></tr>
<tr><td>(ಆ)</td><td>ಸಕಾಲ ಯೋಜನೆಗೆ ಒಳಪಡುವ ಇಲಾಖೆಗಳು ಯಾವುವು;</td><td>ಪ್ರಸುತ ಸಕಾಲ ಯೋಜನೆಯಡಿ ಒಟ್ಟು 91 ಇಲಾಖೆ/ಸಂಸ್ಥೆಗಳನ್ನು ಗುರುತಿಸಲಾಗಿದೆ.</td></tr>
<tr><td>(ಇ)</td><td>ಸಕಾಲ ಯೋಜನೆಗೆ ಪ್ರಾರಂಭದಿಂದ ಪ್ರಸುತ ಅವಧಿವರೆಗೆ ಸ್ವೀಕರಿಸಲಾದ ಅರ್ಜಿಗಳು, ವಿಲೇ ಆದ ಅರ್ಜಿಗಳು ಹಾಗೂ ಬಾಕಿ ಇರುವ ಅರ್ಜಿಗಳೆಷ್ಟು; (ವರ್ಷವಾರು ವಿವರಗಳನ್ನು ನೀಡುವುದು);</td><td>ಸಕಾಲ ಯೋಜನೆಗೆ ಸಂಬಂಧಿಸಿದಂತೆ ಸ್ವೀಕರಿಸಲಾದ ಅರ್ಜಿಗಳು, ವಿಲೇ ಆದ ಅರ್ಜಿಗಳು ಹಾಗೂ ಬಾಕಿ ಇರುವ ಅರ್ಜಿಗಳ ವಿವರಗಳನ್ನು ಈ ಕೆಳಗಿನಂತೆ ಒದಗಿಸಲಾಗಿದೆ:-
<table>
<tr><th>ವರ್ಷ</th><th>ಸ್ವೀಕೃತವಾದ ಒಟು ಅರ್ಜಿಗಳ ಸಂಖ್ಯೆ</th><th>ವಿಲೇ ಮಾಡಿದ ಒಟು ಅರ್ಜಿಗಳ ಸಂಖ್ಯೆ</th></tr>
<tr><td>2012</td><td>1,50,18,806</td><td>1,46,65,999</td></tr>
<tr><td>2013</td><td>2,45,24,455</td><td>2,41,06,416</td></tr>
<tr><td>2014</td><td>2,61,98,665</td><td>2,61,41,358</td></tr>
<tr><td>2015</td><td>3,00,67,238</td><td>3,02,15,593</td></tr>
<tr><td>2016</td><td>2,84,86,733</td><td>2,86,61,523</td></tr>
<tr><td>2017</td><td>2,93,21,066</td><td>2,85,36,301</td></tr>
<tr><td>2018</td><td>27,96,12,95</td><td>2,85,25,447</td></tr>
<tr><td>2019</td><td>2,66,12,882</td><td>2,60,41,794</td></tr>
<tr><td>2020 (01.01.2020 to 19.03.2020)</td><td>66,29,434</td><td>66,05,192</td></tr>
<tr><td>ಒಟ್ಟು</td><td>21,48,20,574</td><td>21,34,99,623</td></tr>
</table>
ಬಾಕಿ ಇರುವ ಅರ್ಜಿಗಳ ಸಂಖ್ಯೆ (ಸಂಚಿತ) 24027</td></tr>
<tr><td>(ಈ)</td><td>ಸಕಾಲ ಯೋಜನೆಯಲಿ ಸಲ್ಲಿಸಲಾದ ಅರ್ಜಿಗಳು ವಿಲೇ ಆಗದಿರಲು ಕಾರಣಗಳೇನು?</td><td>ಇದುವರೆವಿಗೂ ಸಕಾಲದಡಿ ಸ್ವೀಕೃತವಾದ ಅರ್ಜಿಗಳಲಿ ಶೇಕಡ 95.30 ಅರ್ಜಿಗಳನು ನಿಗದಿತ ಕಾಲಮಿತಿಯಲಿ ವಿಲೇಮಾಡಲಾಗಿದೆ. ಉಳಿದಂತೆ ಅರ್ಜಿಗಳು ಬಾಕಿ ಉಳಿಯಲು ಈ ಕೆಳಗಿನ ಅಂಶಗಳು ಪ್ರಮುಖ ಕಾರಣಗಳಾಗಿವೆ:-
1. ವಿವಾದಿತ, ಕೋರ್ಟ್ ನಲ್ಲಿ ಇತ್ಯರ್ಥಪಡಿಸಬೇಕಾದ ಪ್ರಕರಣಗಳು.</td></tr>
</table>

		2. ತಾಂತ್ರಿಕ ಸಮಸ್ಯೆ 3. ಕಚೇರಿಗಳಲ್ಲಿರುವ ಖಾಲಿ ಹುದ್ದೆಗಳು 4. ಅರ್ಜಿದಾರರು ನಿಗದಿತ ಸಮಯದಲ್ಲಿ ಸೇವಾ ಶುಲ್ಕವನ್ನು ಪಾವತಿಸದಿರುವುದು.

ಸಂಖ್ಯೆ:ಸಿಆಸುಇ 26 ಎಸ್‌ಎಎಂಎಸ್ 2020

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 82 ಎಫ್‌ಡಬ್ಲೂಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 11–05–2020.

u/s
26/03/20

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2884ಕ್ಕೆ ಉತ್ತರಿಸುವ ಬಗ್ಗೆ.

*****

ಕರ್ನಾಟಕ ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2884ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ನಿಮ್ಮ ನಂಬುಗೆಯ,

(ಗಾಯತ್ರಿ. ಎಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
(ಅರಣ್ಯ–ಎ)

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ 6ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2884

2) ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)

3) ಉತ್ತರಿಸುವ ದಿನಾಂಕ : 26-03-2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ವಿವಿಧ ಭಾಗಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಸರ್ಕಾರದ ಕೈಗೊಂಡಿರುವ ಕ್ರಮಗಳೇನು;	ಹೌದು. ಕಾಡಾನೆಗಳ ಹಾವಳಿಯನ್ನು ತಡೆಗಟ್ಟಲು ಇಲಾಖೆಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ರಾಜ್ಯದಲ್ಲಿ ಕಾಡಾನೆ ಒಳಗೊಂಡಂತೆ ವನ್ಯಜೀವಿಗಳಿಗೆ ಸಂಪೂರ್ಣ ರಕ್ಷಣೆ ನೀಡುವ ಸಲುವಾಗಿ ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯ, ಹುಲಿ ಮೀಸಲು ಅರಣ್ಯ, ಸಂರಕ್ಷಿತ ಮೀಸಲು ಅರಣ್ಯಗಳನ್ನು ಘೋಷಿಸಲಾಗಿ, ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ. 2. ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ, ಅಭಿವೃದಿಗಾಗಿ 2019-20ನೇ ಸಾಲಿನಲ್ಲಿ ರೂ.5.00 ಕೋಟಿ ವೆಚ್ಚದಲ್ಲಿ ಲಂಟಾನ ಮತ್ತು ಯುಪಟೋರಿಯಂ ಕಳೆಗಳ ನಿರ್ಮೂಲನೆ ಎಂಬ ಹೊಸ ಕಾರ್ಯಕ್ರಮ/ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. 3. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ 2016-17 ರಿಂದ 2018-19ನೇ ಸಾಲಿನಲ್ಲಿ 961.9 ಕಿ.ಮೀ. ಆನೆಗಳಿರುವ ಪ್ರದೇಶಗಳಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ ಮತ್ತು ನಿರ್ವಹಣೆ ಮಾಡಲಾಗಿದ್ದು, 2019-20ನೇ ಸಾಲಿನಲ್ಲಿ 115 ಕಿ.ಮೀ. ಸೌರಶಕ್ತಿ ಬೇಲಿ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. 4. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ 2016-17 ರಿಂದ 2018-19 ನೇ ಸಾಲಿನಲ್ಲಿ 443.03 ಕಿ.ಮೀ. ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು, 2019-20ನೇ ಸಾಲಿನಲ್ಲಿ 106 ಕಿ.ಮೀ. ಆನೆತಡೆ ಕಂದಕ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. 5. ಕಾಡಾನೆ ಹಾವಳಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು 2016-17 ರಿಂದ 2018-19ನೇ ಸಾಲಿನಲ್ಲಿ 82.50 ಕಿ.ಮೀ ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. 2019-20ನೇ ಸಾಲಿನಲ್ಲಿ 118 ಕಿ.ಮೀ. ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. 6. ಕಾಡಾನೆ ಹಿಮ್ಮೆಟ್ಟಿಸುವ ತಂಡ (Anti-Depredation Camp) ಹಾಗೂ

ಕ್ಷಿಪ್ರಸ್ಪಂದನ ತಂಡ {Rapid Response Teams (RRT)} ಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

7. ಕಾಡಾನೆಗಳು ಕೃಷಿ ಜಮೀನುಗಳು ಮತ್ತು ವಸತಿ ಪ್ರದೇಶಗಳಲ್ಲಿ ಕಾಣಿಸಿಕೊಂಡಾಗ ಕಾಡಾನೆಗಳ ಮಾಹಿತಿಯನ್ನು ವಿನಿಮಯಿಸಲು/ ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿ, ಸಹಾಯವಾಣಿ ಸಂಖ್ಯೆ 1926 ನ್ನು ಅನುಷ್ಠಾನಗೊಳಿಸಲಾಗಿದೆ.
8. ಕಾಡಾನೆ ಇರುವಂತಹ ಸೂಕ್ಷ್ಮ ಪ್ರದೇಶಗಳಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಆನೆಗಳ ಚಲನವಲನದ ಬಗ್ಗೆ ದೊಡ್ಡಗಾತ್ರದ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ.
9. ಮಡಿಕೇರಿ ಜಿಲ್ಲೆ ಹಾಗೂ ಸಕಲೇಶಪುರ ತಾಲ್ಲೂಕುಗಳಲ್ಲಿ ಆನೆಗಳ ಚಲನವಲನಗಳ ಬಗ್ಗೆ ನಿಗಾವಹಿಸಲು ಹಾಗೂ ಇದರ ಮಾಹಿತಿ ಜನರಿಗೆ ಸಂವಹನ ಮಾಡಲು ಆನೆಗಳ ಗುಂಪಿನ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ರೇಡಿಯೋ ಕಾಲರ್ ಅಳವಡಿಸಲಾಗಿದೆ. ಇಲ್ಲಿಯವರೆಗೆ ಮಡಿಕೇರಿ ಜಿಲ್ಲೆಯಲ್ಲಿ 8 ಕಾಡಾನೆಗಳಿಗೆ ಮತ್ತು ಸಕಲೇಶಪುರ ತಾಲ್ಲೂಕಿನಲ್ಲಿ 4 ಕಾಡಾನೆಗಳಿಗೆ ರೇಡಿಯೋ ಕಾಲರ್ ಅಳವಡಿಸಲಾಗಿದೆ.
10. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಸೆರೆಹಿಡಿದು, ಆಗ್ಗಿಂದಾಗ್ಗೆ ಆನೆ ಶಿಬಿರಗಳಿಗೆ ಕಳುಹಿಸಲಾಗಿರುತ್ತದೆ. 2016-17ರಿಂದ ಇಲ್ಲಿಯವರೆಗೆ 23 ಪುಂಡಾನೆಗಳನ್ನು ಸೆರೆ ಹಿಡಿದು ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.
11. ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಹಾನಿ ಪ್ರಕರಣಗಳಿಗೆ ಇ-ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಆದ್ಯತೆ ಮೇರೆಗೆ ನಿಯಮಾನುಸಾರ ಪರಿಶೀಲಿಸಿ, ನೇರವಾಗಿ ಸಂತ್ರಸ್ಥರ ಖಾತೆಗೆ ದಯಾತ್ಮಕಧನವನ್ನು ಪಾವತಿಸುವ ಪ್ರಕ್ರಿಯೆಯನ್ನು **ಇ-ಪರಿಹಾರ ತಂತ್ರಾಂಶದ** ಮೂಲಕ ನಿರ್ವಹಿಸಲಾಗುತ್ತಿದೆ.

ಆ) ರಾಜ್ಯದಲ್ಲಿ ಆಕಸ್ಮಿಕವಾಗಿ ಆನೆಗಳು ಸಾವಿಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆಕಸ್ಮಿಕವಾಗಿ ಸಾವಿಗೀಡಾದ ಆನೆಗಳ ಸಂಖ್ಯೆ ಎಷ್ಟು; (ವಲಯವಾರು ವಿವರಗಳನ್ನು ನೀಡುವುದು);

ಹೌದು.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಾಡಾನೆಗಳು ಆಕಸ್ಮಿಕವಾಗಿ ಸಾವಿಗೀಡಾಗಿರುವ ಪ್ರಕರಣಗಳ ವಿಭಾಗ / ವಲಯವಾರು ವಿವರ ಈ ಕೆಳಕಂಡಂತಿದೆ.

ವರ್ಷ	ವಿಭಾಗ	ವಲಯ	ಆಕಸ್ಮಿಕವಾಗಿ ಸಾವಿಗೀಡಾದ ಕಾಡಾನೆಗಳು		
			ವಿದ್ಯುತ್ ಸ್ಪರ್ಶ	ಗುಂಡೇಟು / ಕಳ್ಳಬೇಟೆ	ಅಪಘಾತ
2017-18	ವಿರಾಜಪೇಟೆ	ವಿರಾಜಪೇಟೆ	6	–	–
		ಕುಶಾಲನಗರ	1	–	–
	ಬಂಡೀಪುರ	ಕುಂದುಕೆರೆ	1	–	–
		ಹೆಚ್.ಡಿ.ಕೋಟೆ	1	–	–
	ಭದ್ರಾ	ಭದ್ರಾ	1	–	–
	ಬೆಳಗಾಂ	ಗೋಲಿಹಳ್ಳಿ	–	–	1
		ಒಟ್ಟು	10	–	01

2018–19	ಬಂಡೀಪುರ	ಗುಂಡ್ಲುಪೇಟೆ	2	–	–
		ಹೆಡಿಯಾಲ	2	–	–
		ಕುಂದುಕೆರೆ	1	–	–
	ನಾಗರಹೊಳೆ	ಮತ್ತಿಗೋಡು	–	–	1
		ವೀರನಹೊಸಹಳ್ಳಿ	–	–	1
	ಬನ್ನೇರುಘಟ್ಟ ರಾ.ಉ	ಕಗ್ಗಲೀಪುರ	1	–	–
	ಭದ್ರಾವತಿ	ಲಕ್ಕವಳ್ಳಿ	2	–	–
	ಚಿಕ್ಕಮಗಳೂರು	ಚಿಕ್ಕಮಗಳೂರು	1	–	–
	ವಿರಾಜಪೇಟೆ	ವಿರಾಜಪೇಟೆ	–	1	–
	ಹಾಸನ	ಸಕಲೇಶಪುರ	–	–	2
	ಕಾವೇರಿ	ಕೊತ್ತನೂರು	–	1	–
		ಒಟ್ಟು	**09**	**02**	**04**
2019–20	ವಿರಾಜಪೇಟೆ	ಪೊನ್ನಂಪೇಟೆ	–	1	–
	ಕಾವೇರಿ	ಸಂಗಮ	1	–	–
		ಹಲಗೂರು	2	–	–
	ಚಿಕ್ಕಮಗಳೂರು	ಆಲ್ದೂರು	1	–	–
		ಕಡೂರು	1	–	–
	ನಾಗರಹೊಳೆ	ಡಿ.ಬಿ.ಕುಪ್ಪೆ	1	–	–
		ಒಟ್ಟು	**06**	**01**	–

ಇ) ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಹಾಸನ ಜಿಲ್ಲೆಯ ಆಲೂರು, ಯಸಳೂರು ಹಾಗೂ ಸಕಲೇಶಪುರ ವಲಯಗಳ ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿರುವ ಆನೆಗಳಿಂದ, ಸದರಿ ಪ್ರದೇಶದಲ್ಲಿ ಅಪಾರವಾದ ಬೆಳೆನಷ್ಟ, ಆಸ್ತಿನಷ್ಟ ಹಾಗೂ ಕೆಲವೊಮ್ಮೆ ಪ್ರಾಣಹಾನಿ ಉಂಟಾಗುತ್ತಿದೆ. ಆನೆ ಹಾವಳಿ ಉಪಶಮನಕ್ಕಾಗಿ ಇಲಾಖೆಯಿಂದ ಈ ಕೆಳಕಂಡ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

1. ಕಾಡಾನೆಗಳು ಅರಣ್ಯ ಪ್ರದೇಶದಿಂದ ಪಕ್ಕದ ಕೃಷಿ ಹಾಗೂ ಸಾರ್ವಜನಿಕರ ಸ್ಥಳಗಳಲ್ಲಿ ದಾಳಿ ಮಾಡುವುದನ್ನು ತಡೆಗಟ್ಟುವ ಸಲುವಾಗಿ ಸೂಕ್ಷ್ಮ ಪ್ರದೇಶಗಳ ಅರಣ್ಯದ ಅಂಚಿನಲ್ಲಿ 2006–07ನೇ ಸಾಲಿನಲ್ಲಿ ಯಸಳೂರು ವಲಯದಲ್ಲಿ 3.00 ಕಿ.ಮೀ ಹಾಗೂ ಅರಕಲಗೂಡು ವಲಯದಲ್ಲಿ 6.00 ಕಿ.ಮೀ ಮತ್ತು 2017–18ನೇ ಸಾಲಿನಲ್ಲಿ 2.00 ಕಿ.ಮೀ ಹಾಗೂ ಆಲೂರು ವಲಯದಲ್ಲಿ 4.00 ಕಿ.ಮೀ ಒಟ್ಟು 15.00 ಕಿ.ಮೀ ಕಾಡಾನೆ ನಿರೋಧಕ ಕಂದಕಗಳನ್ನು ಮತ್ತು 2010–11ನೇ ಸಾಲಿನಲ್ಲಿ 9.50 ಕಿ.ಮೀ ಸೌರಶಕ್ತಿ ತಂತಿಬೇಲಿಯನ್ನು ನಿರ್ಮಾಣ ಮಾಡಿ ಕಾಡಾನೆ ಹಾವಳಿಯನ್ನು ನಿಯಂತ್ರಿಸಲಾಗಿದೆ.
2. ಕಾಡಾನೆಗಳು ಪದೇ ಪದೇ ಕೃಷಿ ಜಮೀನುಗಳಿಗೆ ದಾಳಿ ಮಾಡುವ ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಪುನಃ ಕಾಡಿಗೆ ಓಡಿಸುವ ಸಲುವಾಗಿ ಸಕಲೇಶಪುರ, ಅರಕಲಗೂಡು ಮತ್ತು ಆಲೂರು ತಾಲ್ಲೂಕುಗಳಲ್ಲಿ ಒಟ್ಟು 06 ಶಾಶ್ವತ ಕಾಡಾನೆ ಹಿಮ್ಮೆಟ್ಟಿಸುವ ಕ್ಯಾಂಪುಗಳನ್ನು ಸ್ಥಾಪಿಸಲಾಗಿದೆ. ಈ ವಿಭಾಗದಲ್ಲಿ 21 ಕಾಡಾನೆಗಳನ್ನು ಹಿಮ್ಮೆಟ್ಟಿಸುವ ತಂಡಗಳು ಹಾಗೂ 05 ಕ್ಷಿಪ್ರ ಕಾರ್ಯಪಡೆಗಳನ್ನು ರಚಿಸಿದ್ದು, ಪ್ರತಿಯೊಂದು ಕ್ಯಾಂಪಿನಲ್ಲೂ ಸ್ಥಳೀಯರ ಜೊತೆಗೆ ನಾಲ್ಕು ಮಂದಿ ನುರಿತ ಸಿಬ್ಬಂದಿಗಳನ್ನು ನಿಯೋಜಿಸಿ ವಾಹನಗಳ ಸೌಲಭ್ಯಗಳನ್ನು ಒದಗಿಸಲಾಗಿದೆ.

3. ಅಲ್ಲದೇ, ಅವರುಗಳಿಗೆ ಪಟಾಕಿ ಹಾಗೂ ಇನ್ನಿತರ ಸಾಮಗ್ರಿಗಳನ್ನು ನೀಡಿ ಹಾವಳಿ ನಡೆಸುವ ಕಾಡಾನೆಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ಧ್ವನಿವರ್ಧಕ, ಭಿತ್ತಿಪತ್ರಗಳ ಮೂಲಕ ಪ್ರಚಾರ ಮಾಡಿ ಕಾಡಾನೆಗಳಿಂದಾಗುವ ಹಾವಳಿ ಬಗ್ಗೆ ಮುನ್ನೆಚ್ಚರಿಕೆ ವಹಿಸಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.
4. ಆನೆ ನಿರೋಧಕ ಕಂದಕಗಳನ್ನು ಮತ್ತು ಸೌರಶಕ್ತಿ ಬೇಲಿಗಳನ್ನು ನಿರ್ಮಾಣ ಮಾಡಲಾಗಿದೆ.
5. ದಿನಾಂಕ 15.11.2013ರ ಆದೇಶದಲ್ಲಿ 25 ಕಾಡಾನೆಗಳನ್ನು ಸೆರೆಹಿಡಿದು ಸ್ಥಳಾಂತರಿಸಲು ನೀಡಿದ ಅನುಮತಿಯಂತೆ, ಸದರಿ ಕಾಡಾನೆಗಳನ್ನು ಹಿಡಿದು ವಿವಿಧ ಅಭಯಾರಣ್ಯಗಳಿಗೆ ಸ್ಥಳಾಂತರಿಸಲಾಗಿದೆ. ಅದಲ್ಲದೇ, 1987–88ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು 70 ಕಾಡಾನೆಗಳನ್ನು ಸೆರೆಹಿಡಿದು ಸ್ಥಳಾಂತರಿಸಲಾಗಿದೆ.
6. ಧ್ವನಿವರ್ಧಕ ಮತ್ತು ಭಿತ್ತಿ ಪತ್ರಗಳ ಮೂಲಕ ಕಾಡಾನೆಗಳಿಂದಾಗುವ ಹಾವಳಿ ಬಗ್ಗೆ ಪ್ರಚಾರ ಮಾಡಿ ಮುನ್ನೆಚ್ಚರಿಕೆ ವಹಿಸಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಬೆಳಗ್ಗೆ ಮತ್ತು ಸಾಯಂಕಾಲ ಕಾಡಾನೆಗಳ ಹಾವಳಿಗಳ ಬಗ್ಗೆ ನಿಗಾವಹಿಸಬೇಕಾದ ಕ್ರಮಗಳ ಕುರಿತು ಸಾರ್ವಜನಿಕರಿಗೆ, ಶಾಲಾ ಮಕ್ಕಳಿಗೆ, ಎಸ್‌ಎಂಎಸ್ ಮುಖಾಂತರ ಎಚ್ಚರಿಕೆ ನೀಡಲಾಗುತ್ತಿದೆ.
7. 4 ಕಾಡಾನೆಗಳನ್ನು ಸೆರೆಹಿಡಿದು ರೇಡಿಯೋ ಕಾಲರ್ ಅಳವಡಿಸಿ, ಅವುಗಳ ಚಲನವಲನ ಅಧ್ಯಯನ ಮಾಡಲಾಗುತ್ತಿದೆ.
8. ಕಾಡಾನೆಗಳಿಗೆ ಆಹಾರ ಒದಗಿಸುವ ಸಲುವಾಗಿ 2018–19ನೇ ಸಾಲಿನಲ್ಲಿ 15.00 ಹೆಕ್ಟೇರು ಹಾಗೂ 2019–20ನೇ ಸಾಲಿನಲ್ಲಿ 70.00 ಹೆಕ್ಟೇರು, ಒಟ್ಟು 85.00 ಹೆಕ್ಟೇರು ಬೊಂಬು ನೆಡುತೋಪು ಬೆಳೆಸಲಾಗಿದೆ.
9. ಕಾಡಂಚಿನ ಗ್ರಾಮಗಳ ಶಾಲಾ ಮಕ್ಕಳನ್ನು ಪ್ರತಿ ದಿನ ನಿವಾಸದಿಂದ ಶಾಲೆಯವರೆಗೆ ಹಾಗೂ ಶಾಲೆಯಿಂದ ನಿವಾಸದವರೆಗೆ ಕರೆತರುವ ಮತ್ತು ಬಿಟ್ಟುಬರುವ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.
10. ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ, ಕಾಫೀ ಪ್ಲಾಂಟರ್ಸ್, ಪರಿಸರ ಪ್ರೇಮಿಗಳು, ರೈತರು ಮತ್ತು ಸಾರ್ವಜನಿಕರೊಡನೆ ಪದೇ ಪದೇ ಸಭೆಗಳನ್ನು ನಡೆಸಿ ಕಾಡಾನೆಗಳ ಹಾವಳಿಯಿಂದ ಮುನ್ನೆಚ್ಚರಿಕೆ ವಹಿಸುವ ಕ್ರಮಗಳ ಕುರಿತು ಮಾಹಿತಿ ನೀಡುವುದು ಮತ್ತು ಅವರಿಂದ ಸಲಹೆ–ಸೂಚನೆಗಳನ್ನು ಪಡೆಯಲಾಗುತ್ತಿದೆ.
11. ಕಾಫಿ ತೋಟದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಯಾವ ಯಾವ ಸಮಯದಲ್ಲಿ ಕಾಡಾನೆಗಳು ಸಂಚರಿಸುವ ಪ್ರದೇಶಗಳಲ್ಲಿ ಚಲಿಸಬೇಕು, ಯಾವ ಯಾವ ಸಮಯದಲ್ಲಿ ಓಡಾಡಬಾರದು ಎಂಬ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.
12. ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟುವ ನಿಟ್ಟಿನಲ್ಲಿ ಮುಂದಿನ ಮಾರ್ಗೋಪಾಯಗಳನ್ನು ರೂಪಿಸಲು ಜಿಲ್ಲಾಧಿಕಾರಿಗಳು, ಹಾಸನ ಇವರು ಶಾಸಕರು, ಸಂಘ–ಸಂಸ್ಥೆಗಳು, ಜನ ಪ್ರತಿನಿಧಿಗಳು ಹಾಗೂ ಅರಣ್ಯ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕಾ ಇಲಾಖಾ ಅಧಿಕಾರಿಗಳು ಮತ್ತು ಮಾಧ್ಯಮದ ಪದಾಧಿಕಾರಿಗಳನ್ನು ಒಳಗೊಂಡಂತೆ ಕೋರ್ ಕಮಿಟಿಯನ್ನು ರಚಿಸಲಾಗಿದೆ.

		13. ಶಾಶ್ವತ ಪರಿಹಾರ ಕಂಡುಹಿಡಿಯಲು ಭಾರತ ಸರ್ಕಾರದಿಂದ ಆನೆ ಟಾಸ್ಕ್ ಫೋರ್ಸ್ ಸಮಿತಿ ರಚನೆಯಾಗಿದ್ದು, ಸದರಿ ಸಮಿತಿಯ ವತಿಯಿಂದ ಪ್ರವಾಸ ಮಾಡಿ ಸಾರ್ವಜನಿಕರು, ಕಾಫಿ ಬೆಳೆಗಾರರು, ಜನಪ್ರತಿನಿಧಿಗಳು ಮತ್ತು ಗ್ರಾಮಸ್ಥರಿಂದ ಅಹವಾಲು/ಅಭಿಪ್ರಾಯಗಳನ್ನು ಪಡೆಯಲಾಗುತ್ತಿದೆ. 14. ಶಾಶ್ವತ ಪರಿಹಾರಕ್ಕಾಗಿ ಹಾಸನ ಜಿಲ್ಲೆಯ ಆಲೂರು ವಲಯದ ದೊಡ್ಡಬೆಟ್ಟ ಮೀಸಲು ಅರಣ್ಯ ಪ್ರದೇಶದಲ್ಲಿ ಒಟ್ಟು 18.00 ಕಿ.ಮೀ ರೈಲ್ವೆ ಬ್ಯಾರಿಕೇಡ್‌ಗಳನ್ನು ಅಳವಡಿಸಲು ಪ್ರಸ್ತಾವನೆ ಇದ್ದು, 2019-20ನೇ ಸಾಲಿನಲ್ಲಿ 4.24 ಕಿ.ಮೀ ಅಳವಡಿಸಲು ವಾರ್ಷಿಕ ಕ್ರಿಯಾ ಯೋಜನೆ ಮಂಜೂರಾಗಿದ್ದು, ಮುಂದಿನ ಪ್ರಕ್ರಿಯೆಗಳು ಪ್ರಗತಿಯಲ್ಲಿದೆ. 15. ಆನೆ ಕಾರಿಡಾರ್ ನಿರ್ಮಿಸಲು 15008.61 ಎಕರೆ ಅರಣ್ಯೇತರ ಪ್ರದೇಶವನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲು ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. 16. ಹಾಸನ ವಿಭಾಗದಲ್ಲಿ 2007-08ನೇ ಸಾಲಿನಿಂದ ದಿನಾಂಕ 15.03.2020ರವರೆಗೆ ಕಾಡಾನೆಗಳ ಹಾವಳಿಯಿಂದ ನಷ್ಟವಾಗಿರುವ 31,364 ಕುಟುಂಬಗಳಿಗೆ ರೂ.13,07,15,530/- ಗಳ ಪರಿಹಾರ ನೀಡಲಾಗಿದೆ. 17. ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಹಾನಿ ಪ್ರಕರಣಗಳಿಗೆ ಇ-ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಆದ್ಯತೆ ಮೇರೆಗೆ ನಿಯಮಾನುಸಾರ ಪರಿಶೀಲಿಸಿ, ನೇರವಾಗಿ ಸಂತ್ರಸ್ಥರ ಖಾತೆಗೆ ದಯಾತ್ಮಕಧನ ಪಾವತಿಸುವ ಪ್ರಕ್ರಿಯೆಯನ್ನು ಇ-ಪರಿಹಾರ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ. 18. ಎಸ್.ಎಂ.ಎಸ್ / ವ್ಯಾಟ್ಸ್‌ಅಪ್ ಗ್ರೂಪ್ ಮಾಡಿಕೊಂಡು ಆನೆಗಳ ಚಲನವಲನಗಳ ಬಗ್ಗೆ ಮಾಹಿತಿಯನ್ನು ವಿನಿಮಯ ಮಾಡಕೊಳ್ಳಲಾಗುತ್ತಿದೆ.

ಸಂಖ್ಯೆ: ಅಪಜೀ 82 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕರ್ನಾಟಕ ಸರ್ಕಾರ

ಸಂ: ಅಪಜೀ 18 ಅಇವಿ 2020
(ಇ-ಕಛೇರಿ ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 19.05.2020

U/S
26/03/20

ಇವರಿಂದ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು-03

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಂಗಾರ.ಎಸ್ (ಸುಳ್ಯ)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2907ಕ್ಕೆ ಉತ್ತರಿಸುವ ಕುರಿತು.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಂಗಾರ.ಎಸ್ (ಸುಳ್ಯ)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2907ಕ್ಕೆ ಸಂಬಂಧಿಸಿದಂತಹ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಪಿ.ವಿ.ಶ್ರೀನಿವಾಸನ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು),
ಅರಣ್ಯ,ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

19/5/20

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2907
ಸದಸ್ಯರ ಹೆಸರು : ಶ್ರೀ ಅಂಗಾರ ಎಸ್ (ಸುಳ್ಯ)
ಉತ್ತರಿಸುವ ದಿನಾಂಕ : 26.03.2020
ಉತ್ತರಿಸುವ ಸಚಿವರು : ಮಾನ್ಯ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು ಬ್ಯಾಗಡಹಳ್ಳಿ ಗ್ರಾಮದ ಸರ್ವೆ ನಂ.32ರ 192 ಎಕರೆ ಪೈಕಿ 52 ಪರಿಭಾವಿತ ಅರಣ್ಯ ಪ್ರದೇಶವನ್ನು ಬೇನಮಾಮಿ ಹೇಮಾವತಿ ಹಿನ್ನೀರು ಸಂತ್ರಸ್ಥ 13 ಜನರಿಗೆ ನಿಗಮ ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಲು ಅನುಕೂಲ ಮಾಡಿಕೊಟ್ಟ ಅರಣ್ಯಾಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ದೋಷಾರೋಪಣಾ ಪಟ್ಟಿ ಸಲ್ಲಿಸುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಶಿಸ್ತುಕ್ರಮ ವಿವರಗಳು ಸಲ್ಲಿಸುವುದು;	ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು ಬ್ಯಾಗಡಹಳ್ಳಿ ಗ್ರಾಮದ ಸರ್ವೆ ನಂ.32ರ 192 ಎಕರೆ ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಲು ಅವಕಾಶ ಮಾಡಿಕೊಟ್ಟಿದ್ದ ಅರಣ್ಯ ಇಲಾಖೆಯ ಆಗಿನ ಉಪ ಅರಣ್ಯ ಸಂರಕ್ಷಣಾಧಿಕಾರಿರವರಿಗೆ ಕಾರಣ ಕೇಳುವ ನೋಟೀಸ್‌ನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಆಗಿನ ಚಿಕ್ಕಮಗಳೂರು ವಿಭಾಗೀಯ ವ್ಯವಸ್ಥಾಪಕರು ಮತ್ತು ಆಗಿನ ಹಾಸನ ಘಟಕದ ನೆಡುತೋಪು ಅಧೀಕ್ಷಕರುಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ಇವರು ಸಕ್ಷಮ ಪ್ರಾಧಿಕಾರವಾಗಿರುವುದರಿಂದ ಅವರ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ.

ಇ)	ಸರ್ಕಾರ ಕ್ರಮ ತೆಗೆದುಕೊಳ್ಳದೇ ವಿಳಂಬ ಮಾಡುತ್ತಿದ್ದಲ್ಲಿ, ಕಾರಣಗಳನ್ನು ತಿಳಿಸುವುದು;	ಸರ್ಕಾರವು ಕ್ರಮ ತೆಗೆದುಕೊಳ್ಳುವಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ.
ಈ)	ಸದರಿ ಪ್ರಕರಣದಲ್ಲಿ ದೂರುದಾರರ ವಿರುದ್ಧವೇ ಶಿಸ್ತುಕ್ರಮ ಜರುಗಿಸಲಾಗಿದೆಯೇ? (ಜರುಗಿಸಿದ್ದಲ್ಲಿ, ವಿವರಗಳನ್ನು ಒದಗಿಸುವುದು).	ಅಂತಹ ಯಾವುದೇ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಸಂಖ್ಯೆ: ಅಪಜೀ 18 ಅಇವಿ 2020

(ಆನಂದ್ ಸಿಂಗ್)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 40 ಎಫ್‌ಟಿಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 11-05-2020.

U/S
26/03/20

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:3097ಕ್ಕೆ ಉತ್ತರಿಸುವ ಬಗ್ಗೆ.

*****

ಕರ್ನಾಟಕ ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:3097ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ನಿಮ್ಮ ನಂಬುಗೆಯ,

(ಗಾಯತ್ರಿ. ಎಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
(ಅರಣ್ಯ-ಎ)

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 6ನೇ ಅಧಿವೇಶನ)

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3097
2)	ಸದಸ್ಯರ ಹೆಸರು	:	ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗ)
3)	ಉತ್ತರಿಸುವ ದಿನಾಂಕ	:	26.03.2020.
4)	ಉತ್ತರಿಸುವವರು	:	ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು.

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕೊಪ್ಪಳ ಜಿಲ್ಲೆಯ ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ಅರಣ್ಯ ಇಲಾಖೆಯು 2018-19 ರಿಂದ ಇಲ್ಲಿಯವರೆಗೂ ಹಮ್ಮಿಕೊಂಡ ಕಾರ್ಯಕ್ರಮಗಳ ವಿವರಗಳನ್ನು ನೀಡುವುದು;	ಕೊಪ್ಪಳ ಜಿಲ್ಲೆಯ ಯಲಬುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಸಾಮಾಜಿಕ ಅರಣ್ಯ ಘಟಕದಲ್ಲಿ 2018-19ನೇ ಸಾಲಿನಿಂದ ಇಲ್ಲಿಯವರೆಗೂ ಹಮ್ಮಿಕೊಂಡ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ಒದಗಿಸಲಾಗಿದೆ.
ಆ)	ನರೇಗಾ ಯೋಜನೆಯಡಿ 2019-20ರಲ್ಲಿ ಕೈಗೊಂಡ ಕಾರ್ಯಕ್ರಮಗಳು ಹಾಗೂ ಸದರಿ ಕಾರ್ಯಕ್ರಮಕ್ಕೆ ಸೆಳೆಯಲಾದ ಅನುದಾನದ ವಿವರಗಳನ್ನು ನೀಡುವುದು;	ನರೇಗಾ ಯೋಜನೆಯಡಿ 2019-20ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳು ಹಾಗೂ ಸದರಿ ಕಾರ್ಯಕ್ರಮಕ್ಕೆ ಬಳಸಲಾದ ಅನುದಾನದ ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.
ಇ)	ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿನ ಚೆಂಡೂರು ಗ್ರಾಮದಲ್ಲಿನ ಉದ್ಯಾನವನ ಕಾಮಗಾರಿ ಯಾವ ಹಂತದಲ್ಲಿದೆ (ವಿವರ ನೀಡುವುದು);	ಯಲಬುರ್ಗ ವಿಧಾನಸಭಾ ಕ್ಷೇತ್ರದಲ್ಲಿನ ಚೆಂಡೂರು ಗ್ರಾಮದಲ್ಲಿ ವೃಕ್ಷೋದ್ಯಾನ ನಿರ್ಮಿಸುವ ಕುರಿತು ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
ಈ)	ಸದರಿ ಕ್ಷೇತ್ರದಲ್ಲಿ ಒತ್ತುವರಿಯಾದ ಅರಣ್ಯ ಇಲಾಖೆಯ ಜಮೀನು ಎಷ್ಟು (ವಿವರ ನೀಡುವುದು);	ಕೊಪ್ಪಳ ಜಿಲ್ಲೆ ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ಚೆಂಡೂರು ಸೆಕ್ಷನ್-4 ಅಧಿಸೂಚಿತ ಅರಣ್ಯ ಪ್ರದೇಶ ಹೊರತುಪಡಿಸಿ ಬೇರೆ ಯಾವುದೇ ಅರಣ್ಯ ಪ್ರದೇಶವಿರುವುದಿಲ್ಲ. ಈ ಪ್ರದೇಶದಲ್ಲಿ ಯಾವುದೇ ಒತ್ತುವರಿಯಾಗಿರುವುದಿಲ್ಲ.
ಉ)	ಒತ್ತುವರಿಯಾಗಿದ್ದಲ್ಲಿ ಸದರಿ ಜಮೀನು ತೆರವು ಕಾರ್ಯಾಚರಣೆಗೆ ಸರ್ಕಾರ ಕೈಗೊಂಡ ಕ್ರಮವೇನು?	ಅನ್ವಯಿಸುವುದಿಲ್ಲ.

ಸಂಖ್ಯೆ: ಅಪಜೀ 40 ಎಫ್ ಟಿ ಎಸ್ 2020

(ಆನಂದ್ ಸಿಂಗ್)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

<u>ನಮೂನೆ-1</u>

ಕೊಪ್ಪಳ ಜಿಲ್ಲೆಯ ಯಲಬುರ್ಗಾ ವಿಧಾನ ಸಭಾ ಕ್ಷೇತ್ರದಲ್ಲಿ ಅರಣ್ಯ ಇಲಾಖೆಯು 2018-19 ರಿಂದ ಇಲ್ಲಿಯವರೆಗೂ ಹಮ್ಮಿಕೊಂಡ ಕಾರ್ಯಕ್ರಮಗಳ ವಿವರ

ಕ್ರಸಂ	ವಿಭಾಗ	ವಲಯ/ಕ್ಷೇತ್ರ	ವರ್ಷ	ಯೋಜನೆ	ಹಮ್ಮಿಕೊಂಡ ಕಾರ್ಯಕ್ರಮಗಳ ವಿವರ
1	ಕೊಪ್ಪಳ ಪ್ರಾದೇಶಿಕ	ಯಲಬುರ್ಗಾ	2018-19	2-83-ರಸ್ತೆ ಬದಿ ನೆಡುತೋಪು	ಮಂಡಲಗೇರಿ-ಬಟ್ಟಪ್ಪನಹಳ್ಳಿ ರಸ್ತೆ ಬದಿ ನೆಡುತೋಪು-3 ಕಿ.ಮೀ.,
					ಗಾಣದಾಳ-ಕಟಗಿಹಳ್ಳಿ ರಸ್ತೆ ಬದಿ ನೆಡುತೋಪು-3 ಕಿ.ಮೀ.,
					ಯರೇಹಂಚಿನಾಳ-ತಿಮ್ಮಾಪುರ ರಸ್ತೆ ಬದಿ ನೆಡುತೋಪು-3 ಕಿ.ಮೀ.,
					ನಿಟ್ಟಾಲಿ ಕ್ರಾಸ್ - ಬೆಣಕಲ್ಲ ರಸ್ತೆ ಬದಿ ನೆಡುತೋಪು-3 ಕಿ.ಮೀ.,
					ತಾಳಕೇರಿ-ಗಾನಾದಾಳ ರಸ್ತೆ ಬದಿ ನೆಡುತೋಪು-3 ಕಿ.ಮೀ.,
			2019-20		ಸಂಗನಾಳ-ಹಾಳಕೇರಿ ರಸ್ತೆ ಬದಿ ನೆಡುತೋಪು-7.20 ಕಿ.ಮೀ.,
					ಮನ್ನಾಪುರ - ಬನ್ನಿಕೊಪ್ಪ ಕ್ರಾಸ್ ರಸ್ತೆ ಬದಿ ನೆಡುತೋಪು-3 ಕಿ.ಮೀ.,
				ಸಿಒಪಿ-051	ಚೆಂಡೂರುನಲ್ಲಿ ಹೊಸ ಸಸ್ಯಕ್ಷೇತ್ರ ನಿರ್ಮಾಣ
1	ಕೊಪ್ಪಳ ಸಾಮಾಜಿಕ ಅರಣ್ಯ	ಯಲಬುರ್ಗಾ	2018-19	ಸಾಮಾಜಿಕ ಅರಣ್ಯ	ನೆಡುತೋಪು ನಿರ್ಮಾಣ-57 ಹೆ
					ಒಂದನೇ ವರ್ಷದ ನೆಡುತೋಪು ನಿರ್ವಹಣೆ-18 ಕಿ.ಮೀ
					ಎರಡನೇ ವರ್ಷದ ನೆಡುತೋಪು ನಿರ್ವಹಣೆ.-20 ಹೆ
					ಮೂರನೇ ವರ್ಷದ ನೆಡುತೋಪು ನಿರ್ವಹಣೆ-12 ಕಿ.ಮೀ
					ಸಸಿಗಳ ನಿರ್ವಹಣೆ-26220 ಸಸಿ
					ಸಸಿಗಳ ಬೆಳೆಸುವುದು-1481 ಸಸಿ
2		ಯಲಬುರ್ಗಾ	2018-19	ಕೆ.ಎಫ್.ಡಿ.ಎಫ್	ಒಂದನೇ ವರ್ಷದ ನೆಡುತೋಪು ನಿರ್ವಹಣೆ-30 ಹೆ
3		ಯಲಬುರ್ಗಾ	2018-19	ಆರ್.ಎಸ್.ಪಿ-ಕೆ.ಎಫ್.ಡಿ.ಎಫ್	ನೆಡುತೋಪು ನಿರ್ಮಾಣ-3 ಕಿ.ಮೀ
4		ಯಲಬುರ್ಗಾ	2018-19	ಆರ್.ಎಸ್.ಪಿ.ಡಿ	ಸಸಿಗಳ ಬೆಳೆಸುವುದು-6000 ಸಸಿ, ಸಸಿಗಳ ನಿರ್ವಹಣೆ-6000 ಸಸಿ
5		ಯಲಬುರ್ಗಾ	2018-19	ಹಸಿರು ಕರ್ನಾಟಕ	ಸಸಿಗಳ ಬೆಳೆಸುವುದು-19000 ಸಸಿ
6		ಯಲಬುರ್ಗಾ	2018-19	ಆರ್.ಎಸ್.ಪಿ	ಒಂದನೇ ವರ್ಷದ ನೆಡುತೋಪು ನಿರ್ವಹಣೆ-3 ಕಿ.ಮೀ
1		ಯಲಬುರ್ಗಾ	2019-20	ಸಾಮಾಜಿಕ ಅರಣ್ಯ	ಒಂದನೇ ವರ್ಷದ ನೆಡುತೋಪು ನಿರ್ವಹಣೆ-57 ಹೆ/ಕಿ.ಮೀ
					ಎರಡನೇ ವರ್ಷದ ನೆಡುತೋಪು ನಿರ್ವಹಣೆ-18 ಕಿ.ಮೀ
					ಮೂರನೇ ವರ್ಷದ ನೆಡುತೋಪು ನಿರ್ವಹಣೆ-12 ಕಿ.ಮೀ
					ಸಸಿಗಳ ನಿರ್ವಹಣೆ-1481 ಸಸಿ
					ಸಸಿಗಳ ಬೆಳೆಸುವುದು-25600 ಸಸಿ
					ಮುಂಗಡ ಕಾಮಗಾರಿ-64 ಹೆ/ಕಿ.ಮೀ
2		ಯಲಬುರ್ಗಾ	2019-20	ಕೆ.ಎಫ್.ಡಿ.ಎಫ್	ಎರಡನೇ ವರ್ಷದ ನೆಡುತೋಪು ನಿರ್ವಹಣೆ-30 ಹೆ
3		ಯಲಬುರ್ಗಾ	2019-20	ಆರ್.ಎಸ್.ಪಿ-ಕೆ.ಎಫ್.ಡಿ.ಎಫ್	ಒಂದನೇ ವರ್ಷದ ನೆಡುತೋಪು ನಿರ್ವಹಣೆ-3 ಕಿ.ಮೀ
4		ಯಲಬುರ್ಗಾ	2019-20	ಆರ್.ಎಸ್.ಪಿ.ಡಿ	ಸಸಿಗಳ ಬೆಳೆಸುವುದು-4000 ಸಸಿ ಸಸಿಗಳ ನಿರ್ವಹಣೆ-6000 ಸಸಿ
5		ಯಲಬುರ್ಗಾ	2019-20	ಹಸಿರು ಕರ್ನಾಟಕ	ಸಸಿಗಳ ಬೆಳೆಸುವುದು-17875 ಸಸಿ ಸಸಿಗಳ ನಿರ್ವಹಣೆ-19000 ಸಸಿ
6		ಯಲಬುರ್ಗಾ	2019-20	ಆರ್.ಎಸ್.ಪಿ	ಎರಡನೇ ವರ್ಷದ ನೆಡುತೋಪು ನಿರ್ವಹಣೆ-3 ಕಿ.ಮೀ
7		ಯಲಬುರ್ಗಾ	2019-20	ಜಿ.ಯು.ಎ	ಸಸಿಗಳ ಬೆಳೆಸುವುದು-500 ಸಸಿ

18/3/20

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವೃತ್ತ, ಬಳ್ಳಾರಿ.

ಅನುಬಂಧ-3

ಕೊಪ್ಪಳ ಜಿಲ್ಲೆಯ ಯಲಬುರ್ಗಾ ವಿಧಾನ ಸಭಾ ಕ್ಷೇತ್ರದಲ್ಲಿ ಅರಣ್ಯ ಇಲಾಖೆಯು 2018-19 ರಿಂದ ಇಲ್ಲಿಯವರೆಗೂ ಹಮ್ಮಿಕೊಂಡ ಕಾರ್ಯಕ್ರಮಗಳ ವಿವರ

ಕ್ರಸಂ	ವಲಯ	ವರ್ಷ	ಯೋಜನೆ	ಹಮ್ಮಿಕೊಂಡ ಕಾರ್ಯಕ್ರಮಗಳ ವಿವರ
1	ಯಲಬುರ್ಗಾ	2018-19	ಸಾಮಾಜಿಕ ಅರಣ್ಯ	ನೆಡುತೋಪು ನಿರ್ಮಾಣ-57 ಹೆ ನೆಡುತೋಪು ನಿರ್ವಹಣೆ-18 ಕಿ.ಮೀ ಒಂದನೇ ವರ್ಷದ ನೆಡುತೋಪು ನಿರ್ವಹಣೆ.-20 ಹೆ ಎರಡನೇ ವರ್ಷದ ನೆಡುತೋಪು ನಿರ್ವಹಣೆ-12 ಕಿ.ಮೀ ಮೂರನೇ ವರ್ಷದ ನೆಡುತೋಪು ನಿರ್ವಹಣೆ-26220 ಸಸಿ ಸಸಿಗಳ ನಿರ್ವಹಣೆ-26220 ಸಸಿ ಸಸಿಗಳ ಬೆಳೆಸುವುದು-1481 ಸಸಿ
2	ಯಲಬುರ್ಗಾ	2018-19	ಕೆ.ಎಫ್.ಡಿ.ಎಫ್	ಒಂದನೇ ವರ್ಷದ ನೆಡುತೋಪು ನಿರ್ವಹಣೆ-30 ಹೆ ರಸ್ತೆಬದಿ ನೆಡುತೋಪು ನಿರ್ಮಾಣ-15 ಕಿ.ಮೀ
3	ಯಲಬುರ್ಗಾ	2018-19	ಮ.ಗ್ರಾ.ರಾ.ಗ್ರಾ.ಉ.ಖಾ ಯೋಜನೆ	ಸಂಘ ಸಂಸ್ಥೆ ನೆಡುತೋಪು ನಿರ್ಮಾಣ-12.50 ಹೆ ಕೃಷಿ ಅರಣ್ಯ ನೆಡುತೋಪು ನಿರ್ಮಾಣ-30 ಹೆ ಮಣ್ಣು ಮತ್ತು ತೇವಾಂಶ ಸಂರಕ್ಷಣಾ ಕಾಮಗಾರಿ-1000 ಘ.ಮೀ ಸಸಿಗಳನ್ನು ಬೆಳೆಸುವುದು- 14/20-5000 ಸಸಿ, 10/16-5000 ಸಸಿ, 8/12-75000 ಸಸಿ ಒಟ್ಟು: **85000** ಸಸಿ
1	ಯಲಬುರ್ಗಾ	2019-20	ಸಾಮಾಜಿಕ ಅರಣ್ಯ	ಒಂದನೇ ವರ್ಷದ ನೆಡುತೋಪು ನಿರ್ವಹಣೆ-57 ಹೆ/ ಕಿ.ಮೀ ಎರಡನೇ ವರ್ಷದ ನೆಡುತೋಪು ನಿರ್ವಹಣೆ-18 ಕಿ.ಮೀ ಮೂರನೇ ವರ್ಷದ ನೆಡುತೋಪು ನಿರ್ವಹಣೆ-12 ಕಿ.ಮೀ ಸಸಿಗಳ ನಿರ್ವಹಣೆ-1481 ಸಸಿ ಸಸಿಗಳ ಬೆಳೆಸುವುದು-25600 ಸಸಿ ಮುಂಗಡ ಕಾಮಗಾರಿ-64 ಹೆ/ಕಿ.ಮೀ
2	ಯಲಬುರ್ಗಾ	2019-20	ಕೆ.ಎಫ್.ಡಿ.ಎಫ್	ಎರಡನೇ ವರ್ಷದ ನೆಡುತೋಪು ನಿರ್ವಹಣೆ-30 ಹೆ ರಸ್ತೆಬದಿ ನೆಡುತೋಪು ನಿರ್ಮಾಣ-9 ಕಿ.ಮೀ
3	ಯಲಬುರ್ಗಾ	2019-20	ಮ.ಗ್ರಾ.ರಾ.ಗ್ರಾ.ಉ.ಖಾ ಯೋಜನೆ	ಬ್ಲಾಕ್ ನೆಡುತೋಪು ನಿರ್ಮಾಣ-15 ಹೆ ಸಂಘ ಸಂಸ್ಥೆ ನೆಡುತೋಪು ನಿರ್ಮಾಣ-37 ಹೆ ಕೃಷಿ ಅರಣ್ಯ ನೆಡುತೋಪು ನಿರ್ಮಾಣ-60 ಹೆ ಮಣ್ಣು ಮತ್ತು ತೇವಾಂಶ ಸಂರಕ್ಷಣಾ ಕಾಮಗಾರಿ-1000 ಘ.ಮೀ ಸಸಿಗಳನ್ನು ಬೆಳೆಸುವುದು- 14/20-4000 ಸಸಿ, 10/16-6000 ಸಸಿ, 8/12-50000 ಸಸಿ ಒಟ್ಟು: **60000** ಸಸಿ

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಸಾಮಾಜಿಕ ಅರಣ್ಯ), ಬೆಂಗಳೂರು.

(2)

ಅನುಬಂಧ-3

ನರೇಗಾ ಯೋಜನೆಯಡಿ 2019–20ರಲ್ಲಿ ಕೈಗೊಂಡ ಕಾರ್ಯಕ್ರಮಗಳು ಹಾಗೂ ಸದರಿ ಕಾರ್ಯಕ್ರಮಕ್ಕೆ ಸೆಳೆಯಲಾದ ಅನುದಾನದ ವಿವರ

ಕ್ರಸಂ	ವಲಯ	ಯೋಜನೆ	ಹಮ್ಮಿಕೊಂಡ ಕಾರ್ಯಕ್ರಮಗಳ ವಿವರ	ಸೆಳೆಯಲಾದ ಅನುದಾನ
1	ಯಲಬುರ್ಗಾ	ಮ.ಗಾ.ರಾ.ಗ್ರಾ.ಉ.ಖಾ ಯೋಜನೆ	ರಸ್ತೆಬದಿ ನೆಡುತೋಪು ನಿರ್ಮಾಣ–9 ಕಿ.ಮೀ	7.89 ಲಕ್ಷ
			ಬ್ಲಾಕ್ ನೆಡುತೋಪು ನಿರ್ಮಾಣ–15 ಹೆ	3.88 ಲಕ್ಷ
2			ಸಂಘ ಸಂಸ್ಥೆ ನೆಡುತೋಪು ನಿರ್ಮಾಣ–37 ಹೆ	4.79 ಲಕ್ಷ
			ಕೃಷಿ ಅರಣ್ಯ ನೆಡುತೋಪು ನಿರ್ಮಾಣ–60 ಹೆ	1.69 ಲಕ್ಷ
			ಮಣ್ಣು ಮತ್ತು ತೇವಾಂಶ ಸಂರಕ್ಷಣಾ ಕಾಮಗಾರಿ–1000 ಘ.ಮೀ	2.53 ಲಕ್ಷ
3			ಸಸಿಗಳನ್ನು ಬೆಳೆಸುವುದು– 14/20–4000 ಸಸಿ, 10/16–6000 ಸಸಿ, 8/12–50000 ಸಸಿ ಒಟ್ಟು: 60000 ಸಸಿ	12.66 ಲಕ್ಷ
		ಒಟ್ಟು:		33.44 ಲಕ್ಷ

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಸಾಮಾಜಿಕ ಅರಣ್ಯ), ಬೆಂಗಳೂರು.

ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 38 ಎಫ್‌ಟಿಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 11-05-2020.

U/S
26/03/20

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ನಿರಂಜನ್ ಕುಮಾರ್ ಸಿ.ಎಸ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2736ಕ್ಕೆ ಉತ್ತರಿಸುವ ಬಗ್ಗೆ.

*****

ಕರ್ನಾಟಕ ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ನಿರಂಜನ್ ಕುಮಾರ್ ಸಿ.ಎಸ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2736ಕ್ಕೆ ಸಂಬಂಧಿಸಿದಂತೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ನಿಮ್ಮ ನಂಬುಗೆಯ,

(ಗಾಯತ್ರಿ, ಎಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
(ಅರಣ್ಯ-ಎ)

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ 6ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2736

2) ಸದಸ್ಯರ ಹೆಸರು : ಶ್ರೀ ನಿರಂಜನ್ ಕುಮಾರ್.ಸಿ.ಎಸ್ (ಗುಂಡ್ಲುಪೇಟೆ)

3) ಉತ್ತರಿಸುವ ದಿನಾಂಕ : 26-03-2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಬೇಸಿಗೆ ಕಾಲದಲ್ಲಿ ಉಂಟಾಗುವ ಅರಣ್ಯ ಕಾಡ್ಗಿಚ್ಚನ್ನು ನಿಯಂತ್ರಿಸಲು ಮುಂಜಾಗ್ರತ ಕ್ರಮವಾಗಿ ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ; ಇದಕ್ಕಾಗಿ ಸರ್ಕಾರ ಮೀಸಲಿರಿಸಿರುವ ಅನುದಾನ ಎಷ್ಟು;	ಬೇಸಿಗೆ ಕಾಲದಲ್ಲಿ ಉಂಟಾಗುವ ಅರಣ್ಯ ಕಾಡ್ಗಿಚ್ಚನ್ನು ನಿಯಂತ್ರಿಸಲು ಮುಂಜಾಗ್ರತಾ ಕ್ರಮವಾಗಿ ಈ ಕೆಳಕಂಡಂತೆ ಕ್ರಮವಹಿಸಲಾಗಿದೆ. • ಅರಣ್ಯ ಇಲಾಖೆಯಲ್ಲಿ ಕಾಡ್ಗಿಚ್ಚು ನಿಯಂತ್ರಣಕ್ಕಾಗಿ ಪ್ರಮಾಣಿತ ಕಾರ್ಯವಿಧಾನವನ್ನು (Standard Operating Procedure) ರೂಪಿಸಲಾಗಿದ್ದು, ಅದರಂತೆ ರಾಜ್ಯಾದ್ಯಂತ ಬೆಂಕಿ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. • ಬೆಂಕಿ ಸಂರಕ್ಷಣಾ ಕಾಮಗಾರಿಗಳ ಕುರಿತು ನಿರ್ದಿಷ್ಟವಾದ ಗ್ರಾಮವಾರು, ಪ್ರದೇಶವಾರು ವಿವರಗಳನ್ನೊಳಗೊಂಡಂತೆ ಕ್ರಿಯಾಯೋಜನೆಯನ್ನು ತಯಾರಿಸಿ, ಅದರಂತೆ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲಾಗುತ್ತಿದೆ. • ಜನರಲ್ಲಿ ಜಾಗೃತಿ ಮೂಡಿಸಲು ದಿನಪ್ರತಿಕೆ, ರೇಡಿಯೋ, ದೂರದರ್ಶನ, ಭಿತ್ತಿಪತ್ರಗಳು, ಬೀದಿ ನಾಟಕಗಳು ಮುಂತಾದವುಗಳ ಮೂಲಕ ಕಾಡ್ಗಿಚ್ಚಿನ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಬೆಂಕಿರೇಖೆಗಳ ನಿರ್ಮಾಣ ಹಾಗೂ ಹಳೆಯ ಬೆಂಕಿರೇಖೆಗಳ ನಿರ್ವಹಣೆ ಮಾಡಲಾಗುತ್ತಿದೆ. • ಅರಣ್ಯ ಭವನದ ಕೇಂದ್ರ ಸ್ಥಾನದಲ್ಲಿ ಶುಲ್ಕ ರಹಿತ ಅರಣ್ಯ ಸಹಾಯವಾಣಿ 1926ನ್ನು ಸ್ಥಾಪಿಸಲಾಗಿದ್ದು, ದಿನದ 24 ಗಂಟೆಯು ಕಾರ್ಯನಿರ್ವಹಿಸುತ್ತದೆ. ಇದರಿಂದಾಗಿ ಸಾರ್ವಜನಿಕರಿಂದ ಕಾಡ್ಗಿಚ್ಚಿನ ಬಗ್ಗೆ ಮಾಹಿತಿ ಸ್ವೀಕೃತವಾದಲ್ಲಿ, ಇಲಾಖೆಯ ಕೆಳಹಂತದ ಸಿಬ್ಬಂದಿಗಳವರೆಗೂ ಮಾಹಿತಿ ರವಾನಿಸಲಾಗುತ್ತದೆ. • ಅರಣ್ಯದಂಚಿನ ಗ್ರಾಮಗಳಲ್ಲಿ ಗ್ರಾಮಸ್ಥರನ್ನು ಒಳಗೊಂಡಂತೆ ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಲಾಗಿದ್ದು, ಕಾಡ್ಗಿಚ್ಚಿನ ನಿಯಂತ್ರಣಕ್ಕೆ ಅರಿವು ಮೂಡಿಸಲಾಗುತ್ತಿದೆ ಹಾಗೂ ಬೆಂಕಿ ನಂದಿಸಲು ರಕ್ಷಣಾ ಕಾಮಗಾರಿಗಳಲ್ಲಿ ಅವರನ್ನು ತೊಡಗಿಸಿಕೊಳ್ಳಲಾಗುತ್ತದೆ. • ಕಾಡ್ಗಿಚ್ಚು ಭಾದಿತ ಅರಣ್ಯ ಪ್ರದೇಶಗಳಲ್ಲಿ ಬೆಂಕಿ ರಕ್ಷಣಾ ಪಡೆಗಳನ್ನು ರಚಿಸಲಾಗಿದ್ದು, ರಕ್ಷಣಾಕಾರ್ಯಗಳಲ್ಲಿ ಅವರ ಸಹಕಾರವನ್ನು ಪಡೆಯಲಾಗುತ್ತಿದೆ. ಆಧುನಿಕ ಬೆಂಕಿ ಶಸ್ತ್ರಾಸ್ತ್ರಗಳನ್ನು, ಶಿರಸ್ತ್ರಾಣ, ಜಾಕೆಟ್‌ಗಳು, ಬ್ಯಾಕ್‌ಪ್ಯಾಕ್‌ಗಳನ್ನು ಬೆಂಕಿ ಕಾವಲುಗಾರರಿಗೆ ಒದಗಿಸಲಾಗಿದೆ.

- ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ (KSRSAC) ನೇತೃತ್ವದಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO), ಭಾರತೀಯ ಅರಣ್ಯ ಸಮೀಕ್ಷೆ (FSI), ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (KSNDMC) ಮತ್ತು ಅರಣ್ಯ ಇಲಾಖೆಯ ಸಹಯೋಗದೊಂದಿಗೆ, ಅರಣ್ಯ ಬೆಂಕಿ ಉಸ್ತುವಾರಿ ಮತ್ತು ವಿಶ್ಲೇಷಣಾ ಕೋಶ (Fire Monitoring & Analysing Cell) ಸ್ಥಾಪಿಸಲಾಗಿದೆ.
- Fire Alerts, ಅರಣ್ಯ ಮೇಲ್ಪದರ, ಬೌಂಡರಿ ಮತ್ತು ಹವಾಮಾನ ಮಾಹಿತಿ, ಕಾಡ್ಗಿಚ್ಚಿಗೆ ಗುರಿಯಾದ ಪ್ರದೇಶಗಳ ಮಾಹಿತಿ ಪಡೆಯಲು ಒಂದು ಜಿಯೋ ಪೋರ್ಟಲ್ ಮತ್ತು ಮೊಬೈಲ್ಆ್ಯಪ್‌ನ್ನು ಅಭಿವೃದ್ಧಿಪಡಿಸಲಾಗಿದೆ.

ಈ ಕೆಳಕಂಡ ಮೂರು ಯೋಜನೆಗಳಡಿ ಬೆಂಕಿ ಸಂರಕ್ಷಣಾ ಕಾಮಗಾರಿಗಳಿಗೆ ಮೀಸಲಿಟ್ಟಿರುವ ಅನುದಾನದ ವಿವರಗಳು ಕೆಳಕಂಡಂತಿದೆ.

ಕ್ರ ಸಂ	ಯೋಜನೆ	ರೂ. (ಲಕ್ಷಗಳಲ್ಲಿ)
1	ಸಿಎಸ್ಎಸ್. ಕೇಂದ್ರ ಪುರಸ್ಕೃತ ಬೆಂಕಿ ನಿಯಂತ್ರಣ ಮತ್ತು ನಿರ್ವಹಣೆ ಯೋಜನೆ-139 ಪ್ರಧಾನ ಕಾಮಗಾರಿಗಳು	284.90
2	ಅರಣ್ಯ ಸಂರಕ್ಷಣೆ ನೈಸರ್ಗಿಕ ಪುನರುತ್ಪತ್ತಿ ಸಾಂಪ್ರದಾಯಿಕ ಕಾಮಗಾರಿಗಳು 139 ಪ್ರಧಾನ ಕಾಮಗಾರಿಗಳು	1025.00
3	ಅರಣ್ಯ ಸಂರಕ್ಷಣೆ ನೈಸರ್ಗಿಕ ಪುನರುತ್ಪತ್ತಿ ಸಾಂಪ್ರದಾಯಿಕ ಕಾಮಗಾರಿಗಳು 180 Machinery and Equipment (ಬೆಂಕಿ ನಂದಿಸುವ ಸಲಕರಣೆಗಳ ಖರೀದಿಗಾಗಿ)	100.00

ಆ)	ಬಂಡೀಪುರ ಅಭಯಾರಣ್ಯದಲ್ಲಿ ಅತೀ ಹೆಚ್ಚು ಕಾಡ್ಗಿಚ್ಚು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಇ)	ಬಂದಿದ್ದಲ್ಲಿ, ಕಳೆದ ವರ್ಷ ಬಂಡೀಪುರ ಅರಣ್ಯದಲ್ಲಿ ಕಾಡ್ಗಿಚ್ಚಿನಿಂದ ಎಷ್ಟು ಪ್ರಾಣಿಗಳು/ಮರಗಳು ಬೆಂಕಿಗೆ ಆಹುತಿಯಾಗಿವೆ; (ಸಂಖ್ಯೆವಾರು ವಿವರ ನೀಡುವುದು)	ಕಳೆದ ವರ್ಷ ಬಂಡೀಪುರದಲ್ಲಿ ಉಂಟಾದ ಬೆಂಕಿಯು ನೆಲಮಟ್ಟದ ಬೆಂಕಿಯಾಗಿದ್ದು, ಒಣಗಿದ ಹುಲ್ಲು, ಲಂಟಾನಾ ಕಳೆ ಮತ್ತು ಕುರುಚಲು ಗಿಡಗಳು ಮಾತ್ರ ಬೆಂಕಿಯಿಂದ ಸುಟ್ಟಿದ್ದು, ಯಾವುದೇ ವನ್ಯಪ್ರಾಣಿಗಳು ಆಹುತಿಯಾಗಿರುವುದು ಕಂಡುಬಂದಿರುವುದಿಲ್ಲ.
ಈ)	ಈ ಕಾಡ್ಗಿಚ್ಚುಗಳನ್ನು ಪ್ರಸಕ್ತ ವರ್ಷದಲ್ಲಿ ನಿಯಂತ್ರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಕಾಡ್ಗಿಚ್ಚುಗಳಿಂದ ಉಂಟಾಗುತ್ತಿರುವ ನಷ್ಟದ ಪ್ರಮಾಣ ಎಷ್ಟು? (ಸಂಪೂರ್ಣ ವಿವರ ನೀಡುವುದು)	2019-20ನೇ ಸಾಲಿನಲ್ಲಿ ಅರಣ್ಯ ಪ್ರದೇಶಕ್ಕೆ ಬೆಂಕಿ ಬೀಳದಂತೆ ನೋಡಿಕೊಳ್ಳಲು ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. 1. ಹಾಲಿ ಇರುವ ಒಟ್ಟು 2726 ಕಿ.ಮೀ ಉದ್ದದಷ್ಟು ಬೆಂಕಿ ರೇಖೆಗಳಲ್ಲಿ ಬೆಳೆದಿರುವ ಹುಲ್ಲನ್ನು ಕತ್ತರಿಸಿ 10 ಮೀಟರ್ ಅಗಲಕ್ಕೆ ನಿರ್ವಹಿಸಲಾಗಿರುತ್ತದೆ. 2. ಹೊಸದಾಗಿ 101.5 ಕಿ.ಮೀ ಉದ್ದದಷ್ಟು ಹೊಸ ಬೆಂಕಿ ರೇಖೆಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. 3. ಅರಣ್ಯ ಪ್ರದೇಶಕ್ಕೆ ಬೆಂಕಿ ಬೀಳುವುದನ್ನು ತಡೆಗಟ್ಟುವುದಕ್ಕಾಗಿ ಒಟ್ಟು 444 ಸ್ಥಳೀಯ ಗಿರಿಜನರು ಹಾಗೂ ಇತರರನ್ನು ಬೆಂಕಿವಾಚರ್‌ಗಳನ್ನಾಗಿ ನೇಮಕ ಮಾಡಿಕೊಳ್ಳಲಾಗಿರುತ್ತದೆ.

		4. ಅವಶ್ಯಕತೆಗನುಗುಣವಾಗಿ ಬೆಂಕಿ ರಕ್ಷಣೆ ಕೆಲಸಗಳಿಗೆ ಉಪಯೋಗಿಸುವ ಉಪಕರಣಗಳನ್ನು ಖರೀದಿಸಲಾಗಿರುತ್ತದೆ. 5. ಅರಣ್ಯ ಪ್ರದೇಶದ ಅಂಚಿನಲ್ಲಿ ಬರುವ ಗ್ರಾಮಗಳು, ಗಿರಿಜನ ಹಾಡಿಗಳು, ಪರಿಸರ ಅಭಿವೃದ್ಧಿ ಸಮಿತಿಗಳು ಹಾಗೂ ಶಾಲೆಗಳಲ್ಲಿ ಬೆಂಕಿ ರಕ್ಷಣೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.
		6. ಅರಣ್ಯ ಪ್ರದೇಶದ ಅಂಚಿನಲ್ಲಿ ಬೇಸಿಗೆಯ ಬೆಂಕಿ ಕಾಲದಲ್ಲಿ ಡ್ರೋಣ್ ಸೇವೆಯನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. 7. ಅಗ್ನಿಶಾಮಕ ದಳ ಇಲಾಖೆಯ ವಾಹನಗಳು ಹಾಗೂ ಸಿಬ್ಬಂದಿಗಳನ್ನು ಬೆಂಕಿ ರಕ್ಷಣೆ ಕೆಲಸಗಳಿಗಾಗಿ ನಿಯೋಜಿಸಿಕೊಳ್ಳಲಾಗಿರುತ್ತದೆ. 8. ಅರಣ್ಯ ಪ್ರದೇಶಕ್ಕೆ ಬೆಂಕಿ ಬೀಳದಂತೆ ಎಲ್ಲಾ ರೀತಿಯ ಮುಂಜಾಗೃತ ಕ್ರಮಕೈಗೊಂಡು ಇಲಾಖೆಯ ಖಾಯಂ, ಹಂಗಾಮಿ ಸಿಬ್ಬಂದಿಗಳ ಸೇವೆಯನ್ನು ಹಾಗೂ ರಕ್ಷಣಾ ವಾಹನಗಳ ಸೇವೆಯನ್ನು ಪೂರ್ಣ ಪ್ರಮಾಣದಲ್ಲಿ ಬೆಂಕಿ ರಕ್ಷಣೆ ಕೆಲಸಗಳಿಗಾಗಿ ಉಪಯೋಗಿಸಿ ಕೊಳ್ಳಲಾಗುತ್ತಿದೆ. 9. ಬಾಡಿಗೆ ಆಧಾರದಲ್ಲಿ ಒಟ್ಟು 12 ಪಿಕ್‌ಅಪ್/ ಟ್ರಾಕ್ಟರ್‌ಗಳನ್ನು ಜನವರಿಯಿಂದ ಮಾರ್ಚ್ 2020ರವರೆಗೆ ನಿಯೋಜಿಸಿಕೊಳ್ಳಲಾಗಿದೆ. 10. ಬೇಸಿಗೆಯ ಬೆಂಕಿ ಕಾಲದಲ್ಲಿ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದಂತಹ ಸಂದರ್ಭದಲ್ಲಿ ಬೆಂಕಿಯನ್ನು ನಂದಿಸಲು ಅನುಕೂಲವಾಗುವುದಕ್ಕಾಗಿ ಒಟ್ಟು 12 ಸಂಖ್ಯೆ 5000 ಲೀಟರ್ ಸಾಮರ್ಥ್ಯದ ಟ್ಯಾಂಕರ್‌ಗಳನ್ನು ಖರೀದಿಸಲಾಗಿರುತ್ತದೆ. ಬಂಡೀಪುರ ಅಭಯಾರಣ್ಯದ ಕುಂದುಕೆರೆ ವಲಯದ ಸೆಕ್ಷನ್-4 ಅರಣ್ಯ ಪ್ರದೇಶಕ್ಕೆ ದಿನಾಂಕ 13.03.2020ರಂದು ಪಕ್ಕದ ರೈತರ ಜಮೀನಿನಿಂದ ಬೆಂಕಿಯು ಪಸರಿಸಿದ್ದು, ಅಂದಾಜು 6-8 ಹೆಕ್ಟೇರ್‌ನಷ್ಟು ಅರಣ್ಯ ಪ್ರದೇಶ ಸುಟ್ಟಿರುತ್ತದೆ.

ಸಂಖ್ಯೆ: ಅಪಜೀ 38 ಎಫ್‌ಟಿಎಸ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 83 ಎಫ್‌ಡಬ್ಲ್ಯೂಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:11.05.2020.

26/03/20
U/S

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ನಿರಂಜನ್ ಕುಮಾರ್.ಸಿ.ಎಸ್ (ಗುಂಡ್ಲುಪೇಟೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2897 ಕ್ಕೆ ಉತ್ತರಿಸುವ ಬಗ್ಗೆ.

*****

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ನಿರಂಜನ್ ಕುಮಾರ್.ಸಿ.ಎಸ್ (ಗುಂಡ್ಲುಪೇಟೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2897 ಕ್ಕೆ ಕನ್ನಡ ಭಾಷೆಯ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ನಿಮ್ಮ ನಂಬುಗೆಯ,

(ಗಾಯತ್ರಿ. ಎಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
(ಅರಣ್ಯ–ಎ)

11/05/2020.

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 6ನೇ ಅಧಿವೇಶನ)

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2897
2)	ಸದಸ್ಯರ ಹೆಸರು	:	ಶ್ರೀ ನಿರಂಜನ್ ಕುಮಾರ್ ಸಿ.ಎಸ್ (ಗುಂಡ್ಲುಪೇಟೆ)
3)	ಉತ್ತರಿಸುವ ದಿನಾಂಕ	:	26.03.2020.
4)	ಉತ್ತರಿಸುವವರು	:	ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು.

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಾಡುಪ್ರಾಣಿಗಳಿಂದ ಉಂಟಾದ ಬೆಳೆನಷ್ಟ ಪರಿಹಾರವನ್ನು ಹೆಚ್ಚು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಹೌದು.
ಆ)	ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು ಕಾಡಂಚಿನಲ್ಲಿದ್ದು, ಕಾಡಾನೆಗಳಿಂದ ರೈತರು ಬೆಳೆದ ಫಸಲು ಕೈ ಸೇರುವ ಮುನ್ನ ಪ್ರಾಣಿಗಳ ಬಾಯಿಗೆ ಆಹಾರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಇ)	ಪ್ರಾಣಿಗಳಿಂದ ಉಂಟಾದ ಬೆಳೆನಷ್ಟ ಪರಿಹಾರವನ್ನು ನೀಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಎಕರೆಗೆ ಎಷ್ಟು ಪರಿಹಾರ ನೀಡಲಾಗುತ್ತಿದೆ; (ವಿವರವಾದ ಮಾಹಿತಿ ಒದಗಿಸುವುದು);	ಹೌದು. ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆನಾಶ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 130 ಎಫ್‌ಡಬ್ಲ್ಯೂ ಎಲ್ 2016, ದಿನಾಂಕ: 19.09.2016ರಲ್ಲಿ ವಿವಿಧ ಬೆಳೆಗಳಿಗೆ ನಿಗದಿಪಡಿಸಿರುವ ದರಗಳನ್ವಯ ಪ್ರತಿ ಕ್ವಿಂಟಾಲ್‌ಗೆ ಪರಿಹಾರ ಧನ ಪಾವತಿಸಲಾಗುತ್ತಿದ್ದು, ಪ್ರತಿ ಎಕರೆಗೆ ಪರಿಹಾರ ನೀಡುತ್ತಿಲ್ಲ.
ಈ)	ಪ್ರಸಕ್ತ ಸಾಲಿನಲ್ಲಿ ಈ ಪ್ರಾಣಿಗಳಿಂದ ಉಂಟಾದ ಬೆಳೆನಷ್ಟ ಪರಿಹಾರವನ್ನು ಎಕರೆಗೆ ಎಷ್ಟು ಹೆಚ್ಚಿಸಲಾಗುವುದು? (ವಿವರವಾದ ಮಾಹಿತಿ ಒದಗಿಸುವುದು);	ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆನಾಶ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 130 ಎಫ್‌ಡಬ್ಲ್ಯೂ ಎಲ್ 2016, ದಿನಾಂಕ: 19.09.2016ರಲ್ಲಿ ವಿವಿಧ ಬೆಳೆಗಳಿಗೆ ನಿಗದಿಪಡಿಸಿರುವ ದರಗಳನ್ನು ಶೇಕಡ 15% ರಷ್ಟು ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಸಂಖ್ಯೆ: ಅಪಜೀ 83 ಎಫ್ ಡಬ್ಲ್ಯೂ ಎಲ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಹಿಂವಕ 260 ಬಿಎಮ್‌ಎಸ್2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿ: 24/03/2020

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ,
ಬೆಂಗಳೂರು.

[illegible] 26/3/20

ಮಾನ್ಯರೆ,

ವಿಷಯ : ಮಾನ್ಯ ವಿಧಾನ ಸಭೆಯ ಸದಸ್ಯರಾದ [illegible] ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3039 ಕ್ಕೆ [illegible] ಉತ್ತರಿಸುವ ಕುರಿತು.

******

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ [illegible] ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3039ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

(ಎಸ್.ಎನ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3039
ಮಾನ್ಯ ಸದಸ್ಯರ ಹೆಸರು	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸಬೇಕಾದ ದಿನಾಂಕ	26.03.2020
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	2019-20ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಯಾವ ಯಾವ ವಿಧಾನಸಭಾ ಕ್ಷೇತ್ರಗಳ ಯಾವ ಯಾವ ದೇವಸ್ಥಾನಗಳ ಸಮುದಾಯ ಭವನ ನಿರ್ಮಾಣಕ್ಕೆ ಎಷ್ಟು ಅನುದಾನ ನೀಡಲಾಗಿದೆ; (ವಿಧಾನಸಭಾ ಕ್ಷೇತ್ರವಾರು-ದೇವಸ್ಥಾನಗಳ ಹೆಸರು ಸಹಿತ ಅನುದಾನ ನೀಡಿಕೆ ಪಟ್ಟಿ ನೀಡುವುದು)	2019-20 ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿವಿಧ ಸಂಘ-ಸಂಸ್ಥೆಗಳು ನಿರ್ಮಿಸುತ್ತಿರುವ ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ ವಿಧಾನ ಸಭಾ ಕ್ಷೇತ್ರಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಇಲಾಖಾ ಅಂತರ್ಜಾಲತಾಣ www.backwardclasses.kar.nic.in ರಲ್ಲಿ ನೀಡಲಾಗಿದೆ.
ಆ)	ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನಸಭಾ ಕ್ಷೇತ್ರದ ವಿವಿಧ ದೇವಸ್ಥಾನಗಳಿಗೆ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ, ಹಾಗಿದ್ದಲ್ಲಿ, ಅವು ಯಾವುವು; (ಬೇಡಿಕೆ ಪಟ್ಟಿ ನೀಡುವುದು)	ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ, 2019-20 ನೇ ಸಾಲಿನಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಸಮುದಾಯ ಭವನ ಮಂಜೂರಾತಿಗೆ ಮನವಿ ಸ್ವೀಕೃತಗೊಂಡಿರುತ್ತವೆ. 1. ಶ್ರೀ ಬಸವೇಶ್ವರ ಸಮುದಾಯ ಭವನ ಸಾ||ಮದಬಾವಿ ತಾ||ಬೈಲಹೊಂಗಲ 2. ಶ್ರೀ ಸಿದ್ಧಾರೂಢ ಮಠ ಸಾ||ಮುರಕಿಬಾವಿ ತಾ||ಬೈಲಹೊಂಗಲ 3. ಶ್ರೀ ಬಸವೇಶ್ವರ ದೇವಸ್ಥಾನ ಸಾ||ಚಿಕ್ಕನಂದಿಹಳ್ಳಿ ತಾ||ಬೈಲಹೊಂಗಲ 4. ಶ್ರೀ ಹೊಸಟ್ಟಿ ಬಸವೇಶ್ವರ ದೇವಸ್ಥಾನ ಸಾ||ನೇಸರಗಿ ತಾ||ಬೈಲಹೊಂಗಲ 5. ಶ್ರೀ ರಾಮಲಿಂಗೇಶ್ವರ ದೇವಸ್ಥಾನ ಸಾ||ಹೊಳಿಹೊಸೂರು ತಾ||ಬೈಲಹೊಂಗಲ 6. ಶ್ರೀ ಚಿಕ್ಕಮೇಳೆ ಬಸವೇಶ್ವರ ದೇವಸ್ಥಾನ ಸಾ||ಹಣ್ಣೀಕೇರಿ ತಾ||ಬೈಲಹೊಂಗಲ 7. ಶ್ರೀ ಗಾಳಿ ಮರನೀರಣ್ಣ ದೇವಸ್ಥಾನ ಸಾ||ಲಕ್ಕುಂಡಿ ತಾ||ಬೈಲಹೊಂಗಲ 8. ಶ್ರೀ ಶರಣಬಸವೇಶ್ವರ ದಾಸೋಹ ಮಠ ಸಾ||ಜಮನೂರು ತಾ||ಬೈಲಹೊಂಗಲ 9. ಶ್ರೀ ಕಲ್ಮೇಶ್ವರ ದೇವಸ್ಥಾನ ಸಾ||ಉಗರಖೋಡ ತಾ||ಬೈಲಹೊಂಗಲ 10. ಶ್ರೀ ಮೌನೇಶ್ವರ ದೇವಸ್ಥಾನ ಚ.ಕಿತ್ತೂರು, ತಾ||ಕಿತ್ತೂರು 11. ಕಿತ್ತೂರು ಪಟ್ಟಣದ ತಾಲ್ಲೂಕು ಮಟ್ಟದ ಗೋಂಧಳಿ ಅಲೆಮಾರಿ ಸಮಾಜದ ಸಮುದಾಯ ಭವನ.

...2

ಇ)	ಸದರಿ ದೇವಸ್ಥಾನಗಳ ಸಮುದಾಯ ಭವನ ನಿರ್ಮಾಣಕ್ಕೆ ಸರ್ಕಾರ ಎಷ್ಟು ಕಾಲಮಿತಿಯೊಳಗಾಗಿ ಅನುದಾನ ನೀಡುವುದು?	ಸಂಘಸಂಸ್ಥೆಗಳು ಸಲ್ಲಿಸುವ ದಾಖಲಾತಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಈ ಕಾರ್ಯಕ್ರಮಕ್ಕೆ ಆಯವ್ಯಯದಲ್ಲಿ ಒದಗಿಸುವ ಅನುದಾನದ ಲಭ್ಯತೆ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆಯನ್ನು ಅವಲಂಬಿಸಿರುತ್ತದೆ.

ಸಂ:ಹಿಂವಕ 260 ಬಿಎಂಎಸ್ 2020

(ಬಿ.ಶ್ರೀರಾಮುಲು)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ಸರ್ಕಾರ

256

ಸಂಖ್ಯೆ: ಹಿಂವಕ ಬಿಎಮ್‌ಎಸ್2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿ: 24/03/2020

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ : ಮಾನ್ಯ ವಿಧಾನ ಸಭೆಯ ಸದಸ್ಯರಾದ ಸಂಜೀವ ಮಠಂದೂರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2714 ಕ್ಕೆ ಉತ್ತರಿಸುವ ಕುರಿತು.

******

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಸಂಜೀವ ಮಠಂದೂರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2714ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,
Kalu
(ಎಸ್.ಎನ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2714
ಮಾನ್ಯ ಸದಸ್ಯರ ಹೆಸರು	ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಉತ್ತರಿಸಬೇಕಾದ ದಿನಾಂಕ	26.03.2020
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	**ಡಿ.ದೇ**ವರಾಜ ಅರಸು **ನಿಗ**ಮದಿಂದ ಹಿಂದುಳಿದ **ವ**ರ್ಗಗಳ ಜನರಿಗೆ ನೀಡುವ **ಗಂಗಾ** ಕಲ್ಯಾಣ/ಕೊಳವೆ **ಬಾ**ವಿಗಳ ವಿಧಾನಸಭಾ **ಕ್ಷೇತ್ರ**ವಾರು ಮಾಹಿತಿ **ನೀ**ಡುವುದು;	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಗಂಗಾ ಕಲ್ಯಾಣ ಯೋಜನೆಯಡಿ ಹಿಂದುಳಿದ ವರ್ಗಗಳ ಜನರಿಗೆ ನೀಡುವ ಕೊಳವೆ ಬಾವಿಗಳ ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಇಲಾಖಾ ಅಂತರ್ಜಾಲತಾಣ www.karnataka.gov.in/dbcdc ರಲ್ಲಿ ನೀಡಲಾಗಿದೆ.
ಆ)	**ಹಿಂ**ದುಳಿದ ವರ್ಗಗಳ ಜನರಿಗೆ **ಶಾಶ್ವತ** ನೀರಾವರಿ ಇಲ್ಲದ **ಮತಕ್ಷೇತ್ರ**ಗಳಿಗೆ ಹೆಚ್ಚುವರಿ **ಕೊಳವೆ** ಬಾವಿಗಳನ್ನು **ಮಂ**ಜೂರು **ಮಾ**ಡಲಾಗುವುದೇ? (ವಿವರ **ನೀ**ಡುವುದು)	ಇಲ್ಲ. ಆಯವ್ಯಯದಲ್ಲಿ ನಿಗಮಕ್ಕೆ ಒದಗಿಸಿದ ಅನುದಾನಕ್ಕೆ ಅನುಗುಣವಾಗಿ ಗ್ರಾಮೀಣ ಪ್ರದೇಶಗಳನ್ನು ಒಳಗೊಂಡ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಏಕ ರೀತಿಯಾಗಿ ಗುರಿ ನಿಗದಿ ಪಡಿಸಲಾಗುತ್ತಿದೆ.

ಸಂ:**ಹಿಂವಕ** 256 ಬಿಎಂಎಸ್ 2020

(ಬಿ.ಶ್ರೀರಾಮುಲು)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ 255 ಬಿಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 22.05.2020

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತ್/ಸಭೆ
ಸುವರ್ಣಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಪರಿಷತ್ತ್/ಸಭೆ ಸದಸ್ಯರಾದ ---ಶ್ರೀ ಅಭಯ ಪಾಟೀಲ--- ಇವರ ಚುಕ್ಕೆ ಗುರುತಿಲ್ಲದ ಪ್ರ.ಸಂ. --3092-- ಕ್ಕೆ ಉತ್ತರಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಪರಿಷತ್ತ್/ಸಭೆ ಸದಸ್ಯರಾದ ---ಶ್ರೀ ಅಭಯ ಪಾಟೀಲ---ಇವರ ಚುಕ್ಕೆ ಗುರುತಿಲ್ಲದ ಪ್ರ.ಸಂ.-3092-ಕ್ಕೆ ಸಂಬಂಧಿಸಿದಂತೆ ಉತ್ತರದ --13-- ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,
[illegible] 22/5/20
(ಜಿ.ಹೆಚ್.ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3092
ಮಾನ್ಯ ಸದಸ್ಯರ ಹೆಸರು	ಶ್ರೀ.ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)
ಉತ್ತರಿಸಬೇಕಾದ ದಿನಾಂಕ	26.3.2020
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ದೊರೆಯುವ ವಿವಿಧ ಬಗೆಯ ಸೌಲಭ್ಯಗಳು ಯಾವುವು ಹಾಗೂ ಅವುಗಳಿಗಿರುವ ಮಾನದಂಡಗಳೇನು;	**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ದೊರೆಯುವ ಸೌಲಭ್ಯಗಳು ಹಾಗೂ ಅವುಗಳಿಗಿರುವ ಮಾನದಂಡಗಳ ವಿವರಗಳನ್ನು ಇಲಾಖಾ ಅಂತರ್ಜಾಲ www.backwardclasses.kar.nic.in ರಲ್ಲಿ ನೀಡಲಾಗಿದೆ. **ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ** ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ದೊರೆಯುವ ವಿವಿಧ ಬಗೆಯ ಸೌಲಭ್ಯಗಳೂ ಹಾಗೂ ಸೌಲಭ್ಯ ಪಡೆಯಲು ಇರುವ ಮಾನದಂಡಗಳು ಇಲಾಖಾ ಅಂತರ್ಜಾಲ www.karnataka.gov.in/dbcdc ರಲ್ಲಿ ನೀಡಲಾಗಿದೆ.
ಆ)	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಎಷ್ಟು ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ನೀಡಲಾಗುತ್ತಿದೆ (ಮತಕ್ಷೇತ್ರವಾರು ಮಾಹಿತಿ ನೀಡುವುದು);	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ 15181 ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ನೀಡಲಾಗುತ್ತಿದೆ. ಮತಕ್ಷೇತ್ರವಾರು ವಿವರ ಇಲಾಖಾ ಅಂತರ್ಜಾಲ www.karnataka.gov.in/dbcdc ರಲ್ಲಿ ನೀಡಲಾಗಿದೆ.
ಇ)	ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಜನಸಂಖ್ಯೆ ಮತ್ತು ಫಲಾನುಭವಿಗಳ ಸಂಖ್ಯೆ ಜಾಸ್ತಿ ಇದ್ದು, ಇಲಾಖೆಯಿಂದ ಈ ಯೋಜನೆಯ ಸೌಲಭ್ಯವನ್ನು ಕಡಿಮೆ ಸಂಖ್ಯೆಯಲ್ಲಿ ನೀಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯೋಜನೆಗಳ ಗುರಿಯನ್ನು ಯಾವ ಆಧಾರದ ಮೇಲೆ ನಿಗದಿಪಡಿಸಲಾಗುವುದು;	ಬಂದಿದೆ. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಸರ್ಕಾರ ಆಯವ್ಯಯದಲ್ಲಿ ಒದಗಿಸುವ ಮೊತ್ತಕ್ಕೆ ಅನುಗುಣವಾಗಿ ವಿಧಾನಸಭಾ ಕ್ಷೇತ್ರವಾರು ಮತ್ತು ಯೋಜನವಾರು ಹಂಚಿಕೆ ಮಾಡಿ ಗುರಿ ನಿಗದಿಪಡಿಸಲಾಗುತ್ತದೆ.

.....2

ಈ)	ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ದಿನಾಂಕ 01.01.2018 ರಿಂದ 29.02.2020ರ ಅವಧಿಯಲ್ಲಿ ವಿವಿಧ ಯೋಜನೆಯಡಿ ಸೌಲಭ್ಯಗಳನ್ನು ಪಡೆಯುತ್ತಿರುವ ಫಲಾನುಭವಿಗಳ ವಿವರಗಳನ್ನು ನೀಡುವುದು (ವರ್ಷವಾರು, ಜಾತಿವಾರು ವಿವರ ನೀಡುವುದು);	ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ದಿನಾಂಕ:01/01/2018 ರಿಂದ 29/02/2020ರ ಅವಧಿಯಲ್ಲಿ ನಿಗಮದ ಯೋಜನೆಗಳಲ್ಲಿ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳ ವರ್ಷವಾರು ಮತ್ತು ಜಾತಿವಾರು ವಿವರ ಇಲಾಖಾ ಅಂತರ್ಜಾಲ www.karnataka.gov.in/dbcdc ರಲ್ಲಿ ನೀಡಲಾಗಿದೆ.
ಉ)	ಕ್ಷೇತ್ರದಲ್ಲಿ ಕಳೆದ 3 ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಮಂಜೂರಾದ ಕೊಳವೆಬಾವಿ ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸದೇ ಇರುವುದರಿಂದ ರೈತ ಬಾಂಧವರು ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ?	ಬಂದಿದೆ. ಕಳೆದ 3 ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿಗಳನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ನೊಂದಾಯಿಸಿದ ನಂತರ, ಸದರಿ ಕಂಪನಿಗಳಿಂದ ವಿದ್ಯುತ್ ಲೈನ್ ನಿರ್ಮಿಸಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿದ್ದು, ಮಳೆಗಾಲ ನಂತರ ಜಮೀನುಗಳಲ್ಲಿ ಬೆಳೆ ಇರುವುದರಿಂದ ಕಂಪನಿ ನಿಯಮಪಾಲಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಬೇಕಾದ ಕಾರಣಗಳ ಹಿನ್ನೆಲೆಯಲ್ಲಿ ಕಾಲಾವಕಾಶ ತೆಗೆದುಕೊಳ್ಳುತ್ತಿರುವುದು ವಿಳಂಬಕ್ಕೆ ಕಾರಣವಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಸಮನ್ವಯ ಸಾಧಿಸಿ, ವಿದ್ಯುದ್ದೀಕರಣ ವೆಚ್ಚವನ್ನು ಕಂಪನಿಗಳಿಗೆ ಮುಂಗಡವಾಗಿ ಪಾವತಿಸಿ ಪ್ರಕ್ರಿಯೆ ಚುರುಕುಗೊಳಿಸಿ ಸಕಾಲದಲ್ಲಿ ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಸಂ:ಹಿಂವಕ 255 ಬಿಎಂಎಸ್ 2020

(ಬಿ.ಶ್ರೀರಾಮುಲು)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ಸರ್ಕಾರ

ಸಂ:ಬಿಸಿಡಬ್ಲ್ಯೂ ೩೨೪ ಬಿಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: ೨೨.05.2020

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತ್/ಸಭೆ
ಸುವರ್ಣಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಪರಿಷತ್ತ್/ಸಭೆ ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ ಕೆ.ಎ. ಇವರ ಚುಕ್ಕೆ ಗುರುತಿಲ್ಲದ ಪ್ರ.ಸಂ. 3121 ಕ್ಕೆ ಉತ್ತರಿಸುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಪರಿಷತ್ತ್/ಸಭೆ ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ ಕೆ.ಎ. ಇವರ ಚುಕ್ಕೆ ಗುರುತಿಲ್ಲದ ಪ್ರ.ಸಂ. 3121 ಕ್ಕೆ ಸಂಬಂಧಿಸಿದಂತೆ ಉತ್ತರದ 13 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

(ಜಿ.ಹೆಚ್.ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ–2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3121
ಮಾನ್ಯ ಸದಸ್ಯರ ಹೆಸರು	ಶ್ರೀ ಹೂಲಗೇರಿ ಡಿ.ಎಸ್.(ಲಿಂಗಸುಗೂರು)
ಉತ್ತರಿಸಬೇಕಾದ ದಿನಾಂಕ	26.03.2020
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
